ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದುವರೆಗೂ ಅಕ್ಕಿ ಕೊಟ್ಟಿಲ್ಲ, ನಾಳೆದ್ದು ಹಬ್ಬ ಇದೆ. ತಿಪಟೂರು ತಾಲ್ಲೂಕಿನಲ್ಲಿ ಒಂದು ಪಂಚಾಯಿತಿಗೂ ಒಂದು ಕ್ವಿಂಟಾಲ್ ಅಕ್ಕಿಯನ್ನು ಕೂಡ ಕೊಟ್ಟಿಲ್ಲ. ಹಬ್ಬಕ್ಕಾದರೂ ಅಕ್ಕಿಯನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಗೋಧಿ ಸಾಕಷ್ಟು ಕೊಟ್ಟಿದೆ. ಇನ್ನೂ ಬೇಕಾದರೆ ಕೊಡುತ್ತೇವೆ. ಅಕ್ಕಿ ಇದ್ದರೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri A. KRISHNA SHETTY.—While moving rice from South Kanara District, has Government taken into consideration the requirement of that district ?

Sri B. D. JATTI.—Yes.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅಭಾವ ಪೀಡಿತ ಪ್ರದೇಶಗಳಲ್ಲಿ ತಿಂಗಳಿಗೆ ಐದು ಕಿಲೋಗ್ರಾಂ ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದರು. ಪ್ರತಿಯೊಂದು ಬಡ ಸಂಸಾರಕ್ಕೂ ಕನಿಷ್ಟಪಕ್ಷ ಐದು ಕಿಲೋಗ್ರಾಂ ಅಕ್ಕಿ ಬರುವಂತೆ ಏರ್ಪಾಡು ಮಾಡುತ್ತೀರಾ, ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಗೋಧಿ ಕೊಡುವುದು ಕಡಮೆ ಬೆರೆ ಇದ್ದರೂ ಅದನ್ನು ಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಅಕ್ಕಿ ಬೆರೆ ಜಾಸ್ತಿ ಇರುವಾಗ ಅದನ್ನು ಹಳ್ಳಿಗಳಿಗೆ ಕೊಟ್ಟು ಮತ್ತೊಬ್ಬರು ಉಪವಾಸ ಬೀಳಬೇಕು ಎನ್ನುವುದು ಮಾನ್ಯ ಸದಸ್ಯರ ಉದ್ದೇಶವೇ ?

ಶ್ರೀ ಎಸ್. ಗೋಪಾಲ ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಕಡೆ ಸರ್ಕಾರದವರು ಡಿಪೋಗಳನ್ನು ತೆರೆದು ಅಕ್ಕಿಯನ್ನು ಒದಗಿಸುತ್ತಿಲ್ಲ. ಕೆಲವು ಸಣ್ಣ ಪುಟ್ಟ ವ್ಯಾಪಾರಸ್ಥರು ಕದ್ದು ಮಾರುತ್ತಿದ್ದರು. ಡಿ.ಐ.ಆರ್. ಹೆದರಿಕೆಯಿಂದ ಅವರೂ ಈಗ ಮಾರುತ್ತಿಲ್ಲ. ಹೀಗಾಗಿ ಬೇಸಾಯದ ಕೂಲಿಕಾರರಿಗೆ ಮತ್ತು ಇತರ ಕೊಂಡು ತಿನ್ನತಕ್ಕ ಜನರಿಗೆ ಯಾವ ಕಾಳೂ ಸಿಕ್ಕುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಡಿಪೋಗಳಲ್ಲಿ ಆಹಾರ ಧಾನ್ಯಗಳು ದೊರೆಯದಿರುವ ಕಾರಣ, ಗ್ರಾಮಸ್ಥರು ಹಾಗೂ ಇತರ ಜನಗಳು ತೊಂದರೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ಎಂದು ಕೇಳಿದ್ದಕ್ಕೆ 'ಬಂದಿಲ್ಲ', ಎಂದು ಉತ್ತರದಲ್ಲಿ ಹೇಳಿದ್ದಾರೆ. ಈ ತೊಂದರೆಗಳನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರದವರು ಏನಾದರೂ ಏಜೆನ್ಸಿ ಮಾಡಿಕೊಂಡಿದ್ದಾರೆಯೇ ? ಯಾರು ತಿಳಿಸಬೇಕು, ಹೇಗೆ ತಿಳಿಸಬೇಕು, ಎನ್ನುವುದನ್ನು ಸರ್ಕಾರದವರು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಬಿ. ಡಿ. ಜತ್ತಿ.—ಪ್ರಶ್ನೆಯನ್ನು ಓದಿದರೆ ಗೊತ್ತಾಗುತ್ತದೆ. ಬ್ರಹ್ಮನಿಗೂ ಉತ್ತರ ಕೊಡಲಿಕ್ಕೆ ಸಾಧ್ಯವಿಲ್ಲದಂಥ ಪ್ರಶ್ನೆಯನ್ನು ಕೇಳಿದ್ದಾರೆ.

2-00 P.M.

Sri B. J. LINGE GOWDA.—Has it not been brought to the notice of the Government repeatedly that inadequate supply of rice and other food articles are being received in Bangalore Rural District ?

Sri B. D. JATTI.—Yes. We have made sufficient reduction in the quota of Bangalore Rural District. If the position improves, normal supply will be restored. Regarding the supply of rice, it is not possible as per the needs of the people.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆ ಕೊರತೆಯ ಪ್ರದೇಶವಾಗಿದ್ದರೂ ಈ ಸಾರಿ ಸಾಧಾರಣವಾಗಿ 15 ಸಾವಿರ ಟನ್ನು ಚಿಲ್ಲರೆಯಷ್ಟು ಬತ್ತವನ್ನು ಅಲ್ಲಿ ಲೆವಿಮಾಡಿ ಸಂಗ್ರಹವಾಗಿದ್ದರೆ, ಅದರೊಳಗೆ 4 ಸಾವಿರ ಟನ್ನುಗಳಷ್ಟು ಬತ್ತವನ್ನು ಬೆಂಗಳೂರಿಗೆ ತಂದಿರುವುದರಿಂದ ದಕ್ಷಿಣ ಕನ್ನಡ ಜಲ್ಲೆಗೆ ಅಕ್ಕಿ ಅಭಾವ ಬರುವುದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರ ಮೊದಲನೆಯ ಮಾತು ಮಂಗಳೂರು ಕೊರತೆಯ ಪ್ರದೇಶವೆಂದು ಹೇಳಿದ್ದು ತಪ್ಪು. ನಮಗೆ ಅಲ್ಲಿಂದ ಎಷ್ಟು ಬೇಕೋ ಅಷ್ಟನ್ನು ತಂದಿದ್ದೇವೆ. ಅವರಿಗೇ ನಾದರೂ ಕಡಿಮೆ ಇದ್ದರೆ ಕೊಡುತ್ತೇವೆ.

ಶ್ರೀ ಎನ್. ಹುಚ್ಚೆಮಾಸ್ತಿಗೌಡ.—ತಲಾ ಒಂದಕ್ಕೆ ತಿಂಗಳಿಗೆ 5 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಈಗತಾನೇ ಮಂತ್ರಿಗಳು ಹೇಳಿದರು. ಆದರೆ ಬೆಲ್ಲಾದಿಂದ ಹಳ್ಳಿಗಳಿಗೆ ಹಂಚುವಾಗ, ತಾಲ್ಲೂಕು ಮಟ್ಟದಲ್ಲಿರುವವರಿಗೆ ಹೆಚ್ಚಿಗೆ ಹಂಚಿ ಹಳ್ಳಿಗಳಲ್ಲಿರುವವರಿಗೆ ಬಹಳ ಕಡಿಮೆಯಾಗಿ ಹಂಚಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಹೊಸ ಯೋಜನೆ ಪ್ರಕಾರ ಹಳ್ಳಿಗಳಲ್ಲಿಯೇ ಆಗಲೀ ಪಟ್ಟಣಗಳಲ್ಲಿಯೇ ಆಗಲೀ ಯಾವುದೇ ಕ್ಷೇತ್ರದಲ್ಲಿಯಾಗಲೀ ಎಲ್ಲಿ ಅಭಾವವಿದ್ದರೆ ಅಲ್ಲಿ ಪ್ರತಿಯೊಬ್ಬರಿಗೂ 5 ಕೆ.ಜಿ. ಯಂತೆ ಕೊಡುವ ವ್ಯವಸ್ಥೆ ಮಾಡಿದೆ. ಯಾರು ಯಾವ ಕ್ಷೇತ್ರಕ್ಕೆ ಬಂದಿಲ್ಲವೆಂದು ಹೇಳುತ್ತಾರೋ ಅಂತಹವರಿಗೆ 5 ಕೆ.ಜಿ. ಗೋಧಿ ಮತ್ತು ಜೋಳವನ್ನು ಕೊಡುವ ಹಾಗೆ ಪ್ರಯತ್ನಮಾಡುತ್ತಿದ್ದೇವೆ.

ಶ್ರೀ ಜಿ. ರಾಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಗೋಧಿ ಇದ್ದರೂ ಸಹ ಅಲ್ಲಿ ಸರಿಯಾದ ವಿತರಣೆಗೆ ಅವಕಾಶ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ವಿತರಣೆಮಾಡುವುದರಲ್ಲಿ ಎಲ್ಲಾದರೂ ಕಷ್ಟವಿದ್ದರೆ ಅದನ್ನು ತಕ್ಷಣ ಸರಿಪಡಿಸುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ನಾನೊಂದು ಪ್ರಶ್ನೆ ಹಾಕಿದೆ. ಅದಕ್ಕೆ ಬೇರೆ ಕಡೆ ನೋಡಿದರೆ ಉತ್ತರ ಸಿಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ನನ್ನ ಹಿಂದಿನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಈ ಪ್ರಶ್ನೆಯನ್ನು ಹಾಕಿರತಕ್ಕಂತಹವರು ಮುಳಬಾಗಿಲು ಕ್ಷೇತ್ರದ ಸದಸ್ಯರು....

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಪ್ರಶ್ನೆ ಕೇಳುವ ಮುಂಚೆ ಇದರಲ್ಲಿ ಏನು ಹೇಳಿದ್ದಾರೆಂಬುದನ್ನು ನೋಡಬೇಕು. ಪ್ರಶ್ನೆ ಈ ರೀತಿ ಇದೆ. Whether it has come to their notice that villagers and other people are being put to hardship on account of non-availability of foodgrains in the depots ? ಅದಕ್ಕೆ ಏನೂ ಇಲ್ಲವೆಂಬ ಪ್ರಸಂಗ ಇಲ್ಲಿ ಬಂದಿಲ್ಲವೆಂದು ನಾನು ಉತ್ತರ ಹೇಳಿರುವುದು.

ಶ್ರೀ ಎಸ್. ಎಸ್. ಕೊಳ್ಕೆ ಬೈರ್.—ಮಾನ್ಯ ಮಂತ್ರಿಗಳು ಉತ್ತರಕೊಡುವಾಗ ದಕ್ಷಿಣಕನ್ನಡ ಜಿಲ್ಲೆ ಕೊರತೆಯ ಪ್ರದೇಶವಲ್ಲವೆಂದು ಹೇಳಿದರು. ಅದಕ್ಕೇನಾದರೂ ಒಂದು ಆಧಾರವುಂಟೋ ?

ಶ್ರೀ ಬಿ. ಡಿ. ಜತ್ತಿ.—ಆಧಾರವೂ ಇದೆ, ಅಂಕಿಅಂಶಗಳೂ ಸಹ ಇವೆ. ಆದ್ದರಿಂದ ಅದು ಕೊರತೆಯ ಪ್ರದೇಶವೆಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರು ಹೆಚ್ಚಿಗೆ ಆಹಾರಧಾನ್ಯಗಳು ಬೇಕು ಎಂಬುದಾಗಿ ಕೇಳಿದರೆ ಅದು ಬೇರೆ ಮಾತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯ ಮಧುಗಿರಿ ಸಬ್ ಡಿವಿಜನ್ ಮತ್ತು ಕೋರಾರ ಜಿಲ್ಲೆಯ ಚಿಕ್ಕಬಳ್ಳಾಪುರದಿಂದ ಹಸಿವಿನಿಂದ ನರಳುತ್ತಿರುವವರ ವರ್ತಮಾನ ಎಷ್ಟು ಎಂದು ಬಂದಿದೆ, ಅನ್ನವಿಲ್ಲದ ಬೀದಿಬೀದಿ ಅಲೆಯುತ್ತಾ ಅನೇಕರು ನಿರ್ಗತಿಕರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ನಿತ್ಯ ನಂಗತಿ ನನಗೆ ಗೊತ್ತಿಲ್ಲ. ಅಂಥಾದ್ದು ಏನಾದರೂ ಇದ್ದರೆ ತರಿಸಿ ನೋಡುತ್ತೇನೆ. ಎರಡನೆಯದು, ಕೆಲಸವಿಲ್ಲದ ಮನುಷ್ಯಾಸಿಗಿ ಅಶಕ್ತರಾಗಿದ್ದವರಿಗೂ ಕೂಡ ಪುಕ್ಕಟೆಯಾಗಿ ಆಹಾರಧಾನ್ಯಗಳನ್ನು ಕೊಡುವ ವ್ಯವಸ್ಥೆಮಾಡಲು ಒಂದು ಸಾವಿರ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಶೇಖರಣೆಮಾಡಿಟ್ಟಿದ್ದೇವೆ. ಈ ತಿಂಗಳಿನಿಂದ 20 ಸಾವಿರ ಜನ ನಿರ್ಗತಿಕರಾಗಿರುವವರಿಗೆ ಕೊಡುವುದಕ್ಕೆ ವ್ಯಾರಂಭಿಸುತ್ತೇವೆ. ಸುಮಾರು 6 ತಿಂಗಳುಗಳಮಟ್ಟಿಗೆ ಆಹಾರವನ್ನು ಕೊಡುವುದಕ್ಕೆ ಪ್ರಯತ್ನಮಾಡಿದ್ದೇವೆ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್‌ಷಾ.—ವಿಜಾಪುರ ಜಿಲ್ಲೆ ಬರಗಾಲ ಪ್ರದೇಶವಾಗಿದ್ದರೂ, ತುಮಕೂರು ಜಿಲ್ಲೆ, ಮೈಸೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಗಳು ಹೆಚ್ಚು ಬರಗಾಲ ಜಿಲ್ಲೆಗಳೆಂದು ಹೇಳಿ ಅಲ್ಲಿಂದ ಜೋಳವನ್ನು ಅಷ್ಟೊಂದು ಕಳುಹಿಸಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಹೋದವರ್ಷ ಜೋಳ ವಿಜಾಪುರದಲ್ಲಿ ಸ್ಟಾಕ್ ಇತ್ತು. ಅದನ್ನು ಆ ರೀತಿಯಾಗಿಯೇ ಇಟ್ಟರೆ ಕೆಟ್ಟುಹೋಗುತ್ತದೆಂದು ಆ ಆಹಾರಧಾನ್ಯವನ್ನು ಹಂಚರಾಗಿದೆ. ಆದರಿಂದಾಗಿ ವಿಜಾಪುರಕ್ಕೆ ತೊಂದರೆ ಇಲ್ಲ.

ಶ್ರೀ ಬಿ. ನಂಜಪ್ಪ.—ಕಾರ್ಪೊರೇಷನ್ ವಿರಿಯಾದಲ್ಲಿ ಅಕ್ಕಿ ಹಂಚಿಕೆ ಈಚೆಗೆ ಸರಿಯಾಗಿ ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅಕ್ಕಿ ಹಂಚಿಕೆ ಸರಿಯಾಗಿ ಆಗುತ್ತಾ ಇಲ್ಲವೆಂಬ ದೂರು ಬಂದಿಲ್ಲ. ಆದರೆ ಕೊಡುವ ಅಕ್ಕಿ ಹೆಚ್ಚಿಗೆ ಪಾಲಿಷ್ ಆಗಿಲ್ಲ, ಕಡಮೆ ಪಾಲಿಷ್ ಆಗಿದೆ ಎಂಬ ದೂರು ಬಂದಿದೆ.

ಶ್ರೀ ಎಸ್. ಅವಲರೆಡ್ಡಿ.—ಈಗತಾನೇ ಆಹಾರ ಸಚಿವರು ಹೇಳಿದರು ಚಿಕ್ಕಬಳ್ಳಾಪುರದಲ್ಲಿ ಜನ ನರಳುತ್ತಿದ್ದು ಅವರ ಗಮನಕ್ಕೆ ಬಂದಿಲ್ಲವೆಂದು. ಹಾಗಾದರೆ ಆಹಾರವಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೂ ಗೊತ್ತಿಲ್ಲ, ಮಾನ್ಯ ಸದಸ್ಯರು ಈಗ ಹೇಳಿದರು. ಅದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಕೃಷ್ಣಶೆಟ್ಟಿ.—ಹಿಂದೆ ಒಂದು ಸಾರಿ ರೆವಿನ್ಯೂ ಮಂತ್ರಿಗಳು ಮೇಲ್ಮನೆಯಲ್ಲಿ ಶ್ರೀಮಾನ್ ಶ್ರೀನಿವಾಸಶೆಟ್ಟಿಯವರ ಪ್ರಶ್ನೆಗೆ ಉತ್ತರ ಕೊಡುವಾಗ.....

ಅಧ್ಯಕ್ಷರು.—ಮೇಲ್ಮನೆಯ ವಿಷಯ ಇಲ್ಲಿ ಹೇಳುವುದು ಬೇಡ. ಸದಸ್ಯರು ಪ್ರಶ್ನೆ ಕೇಳಲಿ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಗೆ ಮಾರ್ಚಿನಲ್ಲಿ ನ್ಯಾಛಾವಿಕವಾಗಿ ಆಹಾರ ಕೊರತೆ ಬರುತ್ತದೆ. ನಮ್ಮ ಲೆಕ್ಕದಲ್ಲಿ ಅದು ಸರ್ಪ್ಲಸ್ ಜಿಲ್ಲೆಯಾದರೂ ಅಲ್ಲಿ ಕೂಲಿಗಾರರು ತುಂಬಾ ಇದ್ದಾರೆ. ಅಲ್ಲಿ ಪೆಸ್ಟ್‌ಕೋಸ್ಟ್ ಮಾರ್ಗವಿದೆ. ಅದರಿಂದ ಕೇರಳಕ್ಕೆ ತುಂಬಾ ಅಕ್ಕಿ ಹೋಗುತ್ತದೆ. ಇದಲ್ಲದೆ ಮತ್ತೆ ಅಡಿಕೆ ತೋಟಗಳು ಅಲ್ಲಿ ಹೆಚ್ಚಾಗಿವೆ. ಆದ್ದರಿಂದ ಈ ಜಿಲ್ಲೆಯು ಮಾರ್ಜಿನಲ್ಲಾಗಿ ಕೆಲಕಾಲ ಡಿಫಿಸಿಟ್ ಬರುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾರ್ಚ್ ತಿಂಗಳಿನ ಅಂಕಿಅಂಶಗಳನ್ನು ನೋಡಿದರೆ ಅದು ಡಿಫಿಸಿಟ್ ಇಲ್ಲವೆಂಬುದು ಸ್ಪಷ್ಟ ಇದೆ. ಮಾನ್ಯ ಸದಸ್ಯರು ಅಂಕಿಅಂಶಗಳನ್ನು ನೋಡಬಹುದು.

ಶ್ರೀ ಎಸ್. ಅವಲರೆಡ್ಡಿ.—ಡಿಸೆಂಬರ್ 26ರಲ್ಲಿ ಶಿಡ್ಲಘಟ್ಟದ ಒಂದು ಗ್ರಾಮದಲ್ಲಿ ಏಳು ಜನರಿರುವ ಒಂದು ಕುಟುಂಬ ವಿಷಪೂರಿತ ಗೆಡ್ಡೆಗಳನ್ನು ತಿಂದು ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಬಂದಿಲ್ಲ. ಹಾಗೇನಾದರೂ ಆಗಿದ್ದರೆ ಸಂಬಂಧಪಟ್ಟ ಪೋಲೀಸ್ ರಿಕಾರ್ಡ್ಸ್‌ನ್ನು ತರಿಸಿ ನೋಡುತ್ತೇನೆ. I will get the records from the Police if they are available.

ಶ್ರೀ ಇ. ನಾರಾಯಣಗೌಡ.—ಕೋಲಾರ ಜಿಲ್ಲೆ ಅಭಾವಪೀಡಿತ ಪ್ರದೇಶವೆಂದು ಗೊತ್ತಿದ್ದರೂ ಕೇವಲ ತರಾ ಒಂದಕ್ಕೆ 5 ಕೆ. ಜಿ. ಅಲ್ಲಿಗೂ ಒದಗಿಸುತ್ತೇವೆಂದು ಹೇಳಿದ್ದಾರೆ. ಅವರ ಅಂಕಿಅಂಶದ ಪ್ರಕಾರ ಅಲ್ಲಿ 5 ಕೆ. ಜಿ. ಸಹ ಸಿಗುತ್ತಾ ಇಲ್ಲ. ಅಲ್ಲಿರುವ ವರ್ತಕರು ಬಿಜಾಪುರ ಮತ್ತು ಗುಲ್ಬರ್ಗಾಗಳಿಂದ ವ್ಯಾಪಾರಮಾಡುತ್ತಿರುವುದರಿಂದ, ಅಲ್ಲಿಂದ ಬೇಕಾದಷ್ಟು ಕೋಲಾರಕ್ಕೆ ಆಹಾರವನ್ನು ತರಿಸಿಕೊಳ್ಳುತ್ತಿರುವುದರಿಂದ ಆ ಜಿಲ್ಲೆಗೆ ಯಾವ ಆಹಾರವನ್ನೂ ಕೊಡಬಾರದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಆ ರೀತಿಯಾಗಿ ಆಜ್ಞೆಯೇನೂ ಮಾಡಿಲ್ಲ. ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ಬಿಜಾಪುರ, ಗುಲ್ಬರ್ಗಾ, ರಾಯಚೂರು ಮತ್ತು ಬಿದರ್ ಜಿಲ್ಲೆಗಳಿಂದ ಅಕ್ಕಿ ಗೋಧಿ ಮತ್ತು ಜೋಳ ರವಾನೆಯ ಬಗ್ಗೆ ಅಲ್ಲಿನ ಡೆಪ್ಯುಟಿಕಮೀಷನರಿಗೂ ಮತ್ತು ಇಲ್ಲಿನ ಡೆಪ್ಯುಟಿ ಕಮಿಷನರಿಗೂ ಪತ್ರ ವ್ಯವಹಾರ ನಡೆದು ಎಷ್ಟೋ ಆಹಾರಧಾನ್ಯಗಳನ್ನು ಅಲ್ಲಿಂದ ವರ್ತಕರು ತಂದಿದ್ದಾರೆ. ಕೋಲಾರದಲ್ಲಿ ಅನೇಕ ವರ್ತಕರು ಅದನ್ನು ಮಾರುತ್ತಿದ್ದಾರೆ. ಆ ಪದಾರ್ಥಗಳಿಗೆ ಕೋಲಾರದಲ್ಲಿ ಒಳ್ಳೆಯ ವ್ಯಾಪಾರವಿದೆ. ಹೆಚ್ಚು ಅಲ್ಲಿ ದೊರಕುತ್ತದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಒಂದು ಸಂಸಾರಕ್ಕೆ 5 ಕೆ. ಜಿ. ಕೊಡುತ್ತಾರೆಂದು ಕೇಳಿದೆ. ಇಬ್ಬರು ಒಂದು ಸಂಸಾರದಲ್ಲಿರುತ್ತಾರೆ. 20 ಜನರು ಇನ್ನೊಂದು ಸಂಸಾರದಲ್ಲಿ ಇರುತ್ತಾರೆ. ಆ ರೀತಿ ಕೊಟ್ಟರೆ ಅದು ಹೇಗೆ ಸಾಕಾಗುತ್ತದೆ ?

ಶ್ರೀ ಬಿ. ಡಿ. ಜತ್ತಿ.—ನಾನು ಒಂದು ಸಂಸಾರಕ್ಕೆ 5 ಕೆ. ಜಿ. ಎಂದೇನೂ ಹೇಳಲಿಲ್ಲ. ತರಾ ಒಂದಕ್ಕೆ 5 ಕೆ. ಜಿ. ಎಂದು ಹೇಳಿದೆ. ಓಪನ್ ಮಾರ್ಕೆಟ್ಟಿನಲ್ಲಿ ಇದನ್ನು ಸಂಪೂರ್ಣವಾಗಿ ಕೊಂಡು ಕೊಳ್ಳುವುದಕ್ಕೆ ಅವಕಾಶವಿದೆ. ಸರ್ಕಾರ ಕೊಡುವುದೇನೋ 5 ಕೆ. ಜಿ.

ಶ್ರೀ ಬಿ. ಬೈರಪ್ಪಾಜಿ.—ಈ ತಿಂಗಳಿನಿಂದ ಸುಮಾರು 20 ಸಾವಿರ ಜನ ನಿರ್ಗತಿಕರಾಗಿರುವವರಿಗೆ ಆಹಾರವನ್ನು ಪುಕ್ಕಟೆಯಾಗಿ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ, ಸುಮಾರು 6 ತಿಂಗಳ ವರೆಗೆ ಆಗುವಷ್ಟು ಆಹಾರವನ್ನು ಅವರಿಗೆ ಒದಗಿಸುವ ಏರ್ಪಾಡು ಮಾಡುತ್ತೇವೆಂದು ಸರ್ಕಾರದವರು ಹೇಳಿದರು. ಅವರು ಯಾವ ಆಧಾರದ ಮೇಲೆ ಈ ಆಹಾರವನ್ನು ಹಂಚುವ ವ್ಯವಸ್ಥೆಮಾಡುತ್ತಾರೆ, ಅದರ ರೂಪರೇಷೆಗಳೇನು ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈ ಸಭೆಯ ಸದಸ್ಯರಾಗಿರುವುದರಿಂದ ಅವರು ಇಂಥಿಂಥವರು ವೃದ್ಧರು, ಅಶಕ್ತರು, ನಿರ್ಗತಿಕರು ಎಂದು ಹೇಳಿದರೆ ಅವರೆಲ್ಲರಿಗೂ ಕೊಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ನಿರ್ಗತಿಕರಿಗೆ ಸಹಾಯ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಒಂದು ಸಾವಿರ ಟನ್ ಗೋಧಿಯನ್ನು ಕೊಟ್ಟಿದ್ದಾರೆಂದು ಹೇಳಿದಿರಿ; ಹಾಗಾದರೆ ಆ ಗೋಧಿಯನ್ನು ನಿರ್ಗತಿಕರಿಗೆ ಹಂಚುವುದಕ್ಕಾಗಿ ಅಂಗಡಿಗಳನ್ನು ತೆರೆದು ಅದರ ಮುಖಾಂತರ ಅವರಿಗೆ ಹಂಚುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅವರಿಗೆ ಆಹಾರವನ್ನು ಒದಗಿಸುವುದಕ್ಕೆ ಪಂಚಾಯಿತಿಗಳ ಮುಖಾಂತರ ಅಂಗಡಿಗಳನ್ನು ಮಾಡಿದರೆ ಅವರಿಗೆ ಒದಗಿಸುತ್ತೇನೆ.

ಶ್ರೀ ನಂಜೀವನಾಥ ಐಕಲ.—ಚಿತ್ರದುರ್ಗ ಜಿಲ್ಲೆಯಲ್ಲಿರುವ ಜಗಳೂರು ಮತ್ತು ಹೊಳಲ್ಕೆರೆ ಮುಂತಾದ ಪ್ರದೇಶಗಳಲ್ಲಿರತಕ್ಕ ಜನಗಳು ಬಲಸೆ ಹೋಗಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಕಾಡುಗಳಲ್ಲಿ ಬಿದಿರು ಅಕ್ಕಿಯನ್ನು ಶೇಖರಣೆ ಮಾಡುತ್ತಾ ಅಲ್ಲಿಯೇ ಇರುವುದು ತಪ್ಪು ಗಮನಕ್ಕೆ ಬಂದಿದೆಯೇ ? ಆ ಜಿಲ್ಲೆಯಲ್ಲಿ ಆ ತರಹ ಎಷ್ಟು ಜನ ಬಲಸೆ ಹೋಗಿದ್ದಾರೆ ಎಂಬುದನ್ನು ಪರಿಶೀಲಿಸಿ ಅದರ ಬಗ್ಗೆ ಒಂದು ವರದಿಯನ್ನು ತರಿಸಿಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಬಿದಿರು ಅಕ್ಕಿಯನ್ನು ಯಾರೂ ಹೊಟ್ಟೆಗೆ ಇಲ್ಲದೆ ಹೋಗಿ ಕೂಡಿ ಹಾಕುತ್ತಿಲ್ಲ. ಈಗ ನಾಕಷ್ಟು ಆಹಾರ ಸಿಕ್ಕುತ್ತಿದೆ ಒಂದು ಮೂಟೆ ಬಿದಿರು ಅಕ್ಕಿಗೆ 25 ರೂಪಾಯಿ ಸಿಕ್ಕುತ್ತದೆ, ರಾಭ ಆಗುತ್ತದೆ ಎಂದು ಹೇಳಿ ಜನಗಳು ಬಿದಿರು ಅಕ್ಕಿಯನ್ನು ಕೂಡಿಹಾಕುತ್ತಿದ್ದಾರೆ. ಈ ರೀತಿ ಅವರು 50 ಸಾವಿರ ಕ್ವಿಂಟಾರ್ ಬಿದಿರು ಅಕ್ಕಿಯನ್ನು ಕೂಡಿ ಹಾಕಿದ್ದಾರೆ. ಅಲ್ಲಿ ಈಗ ನಾಕಷ್ಟು ಆಹಾರ ಸಿಕ್ಕುತ್ತಿದೆ. ಒಂದು ವೇಳೆ ಅಲ್ಲಿ ಆಹಾರ ಸಿಕ್ಕದಿದ್ದರೆ ನಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎ. ಮುನಿಯಪ್ಪ.—ಬೆಂಗಳೂರು ನಗರದಲ್ಲಿ ಕೆಲವು ನ್ಯಾಯ ಬೆಲೆ ಅಂಗಡಿಗಳಲ್ಲಿ ಪೂರಾ ಕೆಂಪು ಇರತಕ್ಕ ಕೋರ್ಸ್ ವೆರೈಟಿ ಅಕ್ಕಿಯನ್ನು ಮಾರಾಟ ಮಾಡುತ್ತಿದ್ದಾರೆ. ಅದು ಸ್ವಲ್ಪ ಹಿನುಕಿದರೆ ಪುಡಿ ಪುಡಿ ಆಗುತ್ತದೆ. ಅಂಥಾ ಅಕ್ಕಿಯನ್ನು ಅಕ್ಕಪಕ್ಕ ಅಕ್ಕಿಗಿಂತಲೂ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಒಂದು ಡಿಪೋದಲ್ಲಿ ಆ ರೀತಿ ಆಗಿತ್ತು. ಈಗ ಅದನ್ನು ಸರಿಪಡಿಸಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಬೆಂಗಳೂರು ಸಿಟಿ ಕಾರ್ಪೊರೇಷನ್ ಏರಿಯಾದಲ್ಲಿ ಸುಮಾರು 10-15 ಜನ ವ್ಯಾಪಾರಸ್ಥರಿಗೆ ಸರ್ಕಾರದವರು ಪ್ರಭಾವ ಬೀರಿ ಆಹಾರಧಾನ್ಯವನ್ನು ಮಾರಾಟ ಮಾಡಲು ಲೈಸೆನ್ಸ್ ಕೊಟ್ಟಿದ್ದಾರೆ. ಅವರು ಸರಿಯಾಗಿ ಆಹಾರ ಧಾನ್ಯವನ್ನು ವಿತರಣೆ ಮಾಡುತ್ತಿಲ್ಲ. ಆದ್ದರಿಂದ ಸಮಗ್ರವಾಗಿ ಬೆಂಗಳೂರು ಸಿಟಿ ಕಾರ್ಪೊರೇಷನ್ ಏರಿಯಾದಲ್ಲಿ ಎಲ್ಲಾ ಡಿಪೊಜಿನ್‌ನಲ್ಲಿಯೂ ಆಹಾರ ಧಾನ್ಯವನ್ನು ಸರಿಯಾಗಿ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಸರಿಯಾಗಿ ವಿಚಾರವನ್ನು ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಈಗ ಬೆಂಗಳೂರು ಸಿಟಿಯಲ್ಲಿ 1,187 ಮಂದಿ ಚಿಲ್ಲರೆ ವ್ಯಾಪಾರಿಗಳ ಮೂಲಕ ಬಳಕೆದಾರರಿಗೆ ಆಹಾರ ಧಾನ್ಯವನ್ನು ವಿತರಣೆಮಾಡಲಾಗುತ್ತಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈಗತಾನೆ ಮಾನ್ಯ ಮಂತ್ರಿಗಳು, ಅಶಕ್ತರು, ವೃದ್ಧರು ಮತ್ತು ಅನಾಥರಿಗೆ ಉಚಿತವಾಗಿ ಆಹಾರ ಧಾನ್ಯವನ್ನು ಕೊಡುತ್ತೇವೆಂದು ಹೇಳಿದರು. ಹಾಗಾದರೆ ಬೆಂಗಳೂರು ಸಿಟಿಯಲ್ಲಿ ಅಂಥಾ ಜನರ ಲಿಸ್ಟನ್ನು ತಮಗೆ ಕೊಟ್ಟರೆ ಅವರಿಗೆ ಉಚಿತವಾಗಿ ಆಹಾರ ಧಾನ್ಯವನ್ನು ಕೊಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅವಶ್ಯಕವಾಗಿ ಕೊಡುತ್ತೇವೆ.

Sri K. LAKKAPPA.—What are the principles in sanctioning licences to wholesale dealers to deal in foodgrains within the Corporation area ?

Mr. SPEAKER.—The question is, there is no time to discuss all this.

Sri K. LAKKAPPA.—Because a few people have monopolised the distribution system in Bangalnre Corporation area. Therefore I am asking.

Sri B. D. JATTI.—Among the wholesale dealers, priority is given to co-operative wholesale dealers. The principle in giving licence are they must have the capacity to lift the quota allotted to them ; they must have administrative ability to distribute ; they must have sufficient godown accommodation to store foodgrains. If there are no blackmarks against them, they will be retained. If there are blackmarks they will be removed.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈಗ ತಾವು ಒಂದು ತಲೆಗೆ ಒಂದು ತಿಂಗಳಿಗೆ 5 ಕೆ. ಜಿ. ಆಹಾರಧಾನ್ಯವನ್ನು ಕೊಡುತ್ತೇವೆಂದು ಹೇಳಿದಿರಿ, ಅದೇ ರೀತಿ ಮೈಸೂರು ನಗರಕ್ಕೂ ಕೊಡಲಿಕ್ಕೆ ಸಾಧ್ಯವಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಇಪ್ಪೊತ್ತಿಪ್ಪತ್ತೊತ್ತರಗಳಾದಮೇಲೆ ಹೊಸ ಯೋಜನೆಯ ಪ್ರಕಾರ ನಾವು ಏನೇನು ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ. ಅದರ ಪ್ರಕಾರ ಇದು ಮೈಸೂರಿಗೂ ಅನ್ವಯಿಸುತ್ತದೆ.

Mr. SPEAKER.—Question time is over. We have spent fifteen Minutes in excess of the usual time. I will not allow any more supplementaries.

QUESTION FOR ANSWER ON THE DAY

(but not put by the Members)

Road from Rudrapura to Hosahalli in Channagiri Taluk.

*Q.—332. Sri KUNDUR RUDRAPPA (Channagiri).—

Will the Government be pleased to state :—

whether they would form a road for agricultural purposes from Rudrapura to Hosahalli *via* Mohideenpura in Channagiri Taluk ?

A.—Sri S. NIJALINGAPPA (Chief Minister).—

It is under consideration.

Business of the House

Mr. SPEAKER.—The other day I said that one or two matters which required consideration and ruling from me, would be taken up today. Two of them relate to matters of privilege. The other is relating to the ruling on the point raised by Sri Gopala Gowda, in regard to the procedure to be followed for the Budget.

I am prepared to take all the three immediately. But the Food debate will get into confusion. Therefore, with regard to this privilege matter, shall I have it tomorrow ? I have got a number of authorities which I am passing on to the Members.

Sri C. J. MUCKANNAPPA (Sira).—Yes, Sir.

Mr. SPEAKER.—With regard to the ruling, the hon. Members do not want it today because it will eat into the time of the Debate.

PETITION OF THE N.G.O.s' ASSOCIATION

Presentation.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ರಾಜ್ಯದ ನಾನ್-ಗೆಜಿಟೆಡ್ ನೌಕರರ ಸಂಘದ ಬೇಡಿಕೆಗಳಿಗೆ ಸಂಬಂಧಪಟ್ಟ ಪಿಟಿಷನ್‌ಅನ್ನು 131ನೇ ರೂಲ್ ಪ್ರಕಾರ ನಾನು ಈ ಸಭೆಗೆ ಪ್ರೆಸೆಂಟ್ ಮಾಡಬೇಕು. ಅದಕ್ಕೆ ತಾವು ಅನುಮತಿಯನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಅದನ್ನು ಪ್ರೆಜೆಂಟ್ ಮಾಡಬಹುದು.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ರೂಲ್ 131ರ ಪ್ರಕಾರ ಮೈಸೂರು ರಾಜ್ಯದ ವಾನ್-ಗೆಜೆಟೆಡ್ ನೌಕರರ ಸಂಘದ ಅಧ್ಯಕ್ಷೆ ಶ್ರೀಮತಿ ಮೇರಿದಿವಾನಿಯಾ ಅವರು ಸಹಿ ಮಾಡಿರುವ ತಮ್ಮ ಸಂಘದ ಬೇಡಿಕೆಗಳಿಗೆ ಸಂಬಂಧಪಟ್ಟ ಮನವಿಯನ್ನು ನಾನು ಈ ಸಭೆಗೆ ಸಲ್ಲಿಸುತ್ತೇನೆ.

ಅಧ್ಯಕ್ಷರು.—ಆ ಮನವಿಯು ಬಂದಿದೆ. ನಾನು ಇದನ್ನು ಪೆಟಿಷನ್ ಕಮಿಟಿಗೆ ಕಳುಹಿಸುತ್ತೇನೆ. ಕಮಿಟಿಯವರು ಇದರ ಮೇರೆ ವರದಿ ಕೊಡುತ್ತಾರೆ. ಆ ವರದಿಯ ಪ್ರಕಾರ ಮುಂದಿನ ಕ್ರಮ ಜಾರಿಗೆ ಬರುತ್ತದೆ.

Member's Representation

ಶ್ರೀ ಎಸ್. ಗೋಪಾಲಗೌಡ.—ನನ್ನ ನಿಲುವಳಿ ನೂಡನೆ ಏನಾಯಿತು ?

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

BUDGET ESTIMATES FOR 1966-67—DEMANDS FOR GRANTS.

Demand Nos. 15 and 53.

Sri B. D. JATTI (Minister for Food).—Sir, on the recommendation of the Governor of Mysore, I beg to move Demand Nos. 15 and 53:—

"That a sum not exceeding Rs. 1,61,85,000 be granted to the Government to defray the charges which will come in course of payment during the financial year for the period ending 31st day of March 1967,in respect of 'Miscellaneous Departments' ".

"That a sum not exceeding Rs. 19,35,82,000 be granted to the Government to defray the charges which will come in course of payment during the financial year for the period ending 31st day of March 1967, in respect of ' Capital Outlay on Schemes of Government Trading' ".

Mr. SPEAKER.—Motion moved :

"That a sum not exceeding Rs. 1,61,85,000 be granted to the Government to defray the charges which will come in course of payment during the financial year for the period ending 31st day of March 1967,in respect of 'Miscellaneous Departments' ".

"That a sum not exceeding Rs. 19,35,82,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Schemes of Government Trading' ".

STATEMENT OF THE MINISTER FOR FOOD

re : **the latest Food Situation in the State.**

Mr. SPEAKER.—Now the Hon. Minister will make a statement so that much of the matter may be clarified and the Members will know what the position is. I would very seriously suggest that this particular time might be utilised by the Whips if they please to arrange and co-ordinate as regards the time. I have no objection to sit for half-an-hour more. From the very beginning let there be co-ordination. Let there be no negligence about it from the beginning. Do not afterwards come and say that 'I want five minutes and ten minutes' and so on.

Sri SIDDIAH KASHIMATH (Shirahatti).—The entire day should be given for Food debate. Let the Hon. Minister give reply tomorrow.

Mr. SPEAKER.—I have no idea of it. Why does he makes suggestions after coming here ? why was the Member not met me ? Anyway, I will have the Business Advisory Committee meeting at 3 o' clock. I shall try to deal with it.

† Sri B. D. JATTI (Minister for Food).—Sri on the 26th February 1966 I had made statement on the Floor of this House about the food position in the State. As the Hon'ble Speaker has desired that I might indicate to the House the latest position and the thinking of Government in regard to the present situation I am making this statement. The particulars relating to the prospects of procurement and allied matters have already been indicated to this House and I do not wish to repeat these details again. I should however like to mention that the following quantities of foodgrains have been procured till 17-3-1966.—

Paddy	93,236 Tonnes (equivalent to 62,158 tonnes of rice)
Jowar	26,484 Tonnes
Maize	131 Tonnes

The total quantity of foodgrains so far procured (expressing paddy in terms of rice) comes to 88,773 tonnes as against a revised target of 1 lakh tonnes of all foddgrains put together.

We are now issuing 3.2 Kgs. of wheat and 3 Kgs. of rice per adult per month in Bangalore City and the Kolar Gold Fields. In view of the fact that the availability of foodgrains in the open market will gradually become difficult in the second quarter of the calendar year and taking into consideration the total foodgrains which are now available with Government and which are expected to become available to Government, it is proposed to raise the total quantum of the issue of foodgrains in these Cities to 8 Kgs. per adult per month with effect from 1-4-1966, comprising 3 Kgs. of wheat, 3 Kgs. of rice and 2 Kgs. of milo. The consumer will be given the option of taking milo in lieu of the rice and/or wheat components of the ration. Since it is the cheapest grain which is available with Government, this option might be of advantage to the poorer sections of the community in these Cities.

(SRI B. D. JATTI)

As the Hon'ble Members are aware the Government of India have been giving us substantial allotments of wheat and milo but are finding it difficult to give us adequate quantities of rice on account of their several commitments on the limited quantities of rice which they can command. They have, however, promised to help us to the maximum possible extent. The Governments of Andhra Pradesh and Madras whom we approached in the matter have also been good enough to help us.

Wheat is now being issued in the following Cities/Towns/areas with a concentration of labour population at the rate of 3 Kgs. per adult per month and other foodgrains are being given to the extent available, on a purely *ad hoc* basis.—

Mysore; Hubli-Dharwar; Belgaum; Gulbarga-Shahabad; Mangalore; Bellary; Bijapur; Davangere; Gadag-Betgeri; Bhadravathi; Hospet; Sharavathi; Udipi; Bagalkot; Bidar; Nipani; Harihar; Dandeli; Koppal; Hatti Gold Mines.

It has now been decided that in addition to 3 Kgs. of wheat, 2 Kgs. of jowar in areas in which jowar is procured locally and milo in other areas should be given per adult per month with effect from 1-4-1966.

Three (3) Kgs. of wheat are being given per adult per month to the following categories of the population living outside Cities/towns/areas with a concentration of labour population referred to above:

(*a*) Plantation labour;

(*b*) Labour engaged in the larger industrial undertakings;

(*c*) Employees of the Indian Railways;

(*d*) Class III and Class IV employees of Government.

It has been decided that in respect of all these categories of persons as also weavers in Towns in which there is a concentration of weavers foodgrains should be issued at the rate of 5 Kgs. per adult per month whith effect from 1-4-1966 on the same basis as is indicated in respect of Cities/Towns/Areas with a concentration of labour population.

Foodgrains are being issued at the rate of 5 Kgs. per adult per month to the labour employed by the Indian Railways in certain specified areas and the inmates of hostels and other institutions. They will also be given an additional quantity of 2 Kgs. in terms of milo per adult per month with effect from 1-4-1966.

Arrangements have been made for issuing foodgrains at the rate of 10 Kgs. per adult per month to the labour engaged on works in the scarcity affected areas. This arrangement will be stabilised and issues made at this rate with immediate effect.

The Government of India have given 1,000 tonnes of wheat to the State for gratutious distribution among the old and the infirm. Instrutions are being issued that the beneficieries belonging to these categories must be selected and that arrangements should be made for distributing these foodgrains among these categories of the population over a period

of time. Government have also decided that foodgrains should be issued at the rate of 5 Kgs. per adult per month with effect from 1-5-1966 to all the residents of towns with a population of 5,000 and above which are not already covered by the schemes mentioned above.

Government have also decided to issue 5 Kgs. of foodgrains per adult per month in respect of rural artisans and agricultural labour having no lands of their own. In the meanwhile they will continue to get foodgrains on an *ad hoc* basis as hitherto.

The total quantity of foodgrains that would be issued for the month of April 66 to identified categories of population would come to 5,550 tonnes of Rice, 13,580 tonnes of Wheat, 8,370 tonnes of Milo and 1,348 tonnes of Jowar. In addition to this, 3,200 tonnes of Rice 22,500 tonnes of Wheat, 11,000 tonnes of Milo and 4,000 tonnes of Jowar and such quantities of other foodgrains as are procured locally and as could be made available to the deficit districts from the surplus districts will be issued through Fair Price Shops.

During the month of May and the further months the total issues will continue at this rate but a portion of the issues made as on *ad hoc* basis during April 66 will be given to certain identified categeries of population like people in the towns with a population of 5,000 and over and village Artisans and Agricultural Labour in other areas. Statement-A shows the quantities of foodgrains proposed to be issued in April 66; Statement-B shows the quantities of foodgrains proposed to be issued in May and in the further months; Statement-C shows the issue prices at the retail points of the foodgrains which are being issued through Fair Price Shops.

I will keep some statements on the table of this House for the use of the Hon'ble Members.

2-30 P.M.

Statement "A" shows the quantities of foodgrains proposed to be issued in April 1966. Statement "B" shows the quantities of foodgrains proposed to be issued in May 1966 and in the further months. Statement "C" shows the issue price at the retail point from fair price shops.

Sri S. SIVAPPA (Sravanabelagola).—What is the total quantity for each month?

Sri B. D. JATTI.—All these figures are in the statements. I will place them on the Table. If Hon'ble Members want further details, I will give them.

[Mr. Deputy Speaker in the Chair.]

BUDGET ESTIMATES FOR 1966-67—DEMANDS FOR GRANTS.

Demand Nos. 15 and 53

(Contd.)

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ನಭಾಪತಿಗಳೇ, ಈಗತಾನೇ ಆಹಾರ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟಂಥ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆಹಾರ

(ಶ್ರೀ ಎಸ್. ಶಿವಪ್ಪ)

ಇರಾಖೆಯ ಸಿಬ್ಬಂದಿ ಮತ್ತು ಹಂಚಿಕೆ ವ್ಯವಸ್ಥೆಗಾಗಿ ಖರ್ಚು ಮಾಡತಕ್ಕ ಹಣದ ಬೇಡಿಕೆಗಳನ್ನು ಈ ನಭೆಯ ಮುಂದೆ ಇಟ್ಟಿರತಕ್ಕ ಈ ಸಮಯದಲ್ಲಿ ನಾನು ಈ ಬೇಡಿಕೆಯನ್ನು ಅತಿ ತೀವ್ರವಾಗಿ ವಿರೋಧ ಮಾಡುತ್ತಾ ಸರ್ಕಾರ ಈ ಆಹಾರದ ವಿಷಯದಲ್ಲಿ ಎಷ್ಟುಮಟ್ಟಿಗೆ ವಿಫಲವಾಗಿದೆ ಮತ್ತು ತೀರ ಹದ ಗೆಟ್ಟಿರತಕ್ಕ ಪರಿಸ್ಥಿತಿಯನ್ನು ಸರಿಮಾಡುವುದಕ್ಕೆ ತನ್ನ ಅಸಮರ್ಥತೆಯನ್ನು ತೋರಿಸಿಕೊಟ್ಟಿದೆ ಎಂಬುದನ್ನು ಹೇಳುವವನಾಗಿದ್ದೇನೆ. ಮೈಸೂರು ದೇಶದಲ್ಲಿ ಎಂದೂ ಕಾಣದ ಆಹಾರದ ಅಭಾವ ಇವತ್ತು ನಮಗೆ ಕಂಡುಬರುತ್ತಾ ಇದೆ. ಎಲ್ಲಾ ಕಡೆಯಲ್ಲೂ ಕೂಡ ಇಡೀ ಮೈಸೂರು ದೇಶದಾದ್ಯಂತ ಇದನ್ನು ನೋಡುತ್ತಾ ಇದ್ದೇವೆ. ಇವತ್ತು ಆಹಾರ ಸಚಿವರು ಮತ್ತು ಹಣಕಾಸಿನ ಸಚಿವರು ಅವರ ಬಜೆಟ್ ಭಾಷಣದಲ್ಲಿ ಹೇಳಿದಂತಹ ಹೇಳಿಕೆಗಳನ್ನು ನೋಡಿದರೆ ಮೈಸೂರು ದೇಶದ ಆಹಾರದ ಕೊರತೆ ಸರ್ವೇಸಾಧಾರಣವಾಗಿ 4—5 ಲಕ್ಷ ಟನ್ ಕೊರತೆ ಇದ್ದದ್ದು ಈ ವರ್ಷ ಸುಮಾರು 19–20 ಲಕ್ಷ ಟನ್ ಕೊರತೆ ಇರುವುದನ್ನು ಇವತ್ತಿನ ದಿವಸ ಮೈಸೂರು ದೇಶದಲ್ಲಿ ನೋಡುತ್ತಾ ಇದ್ದೇವೆ. 20 ಲಕ್ಷ ಟನ್ ಆಹಾರದ ಕೊರತೆ ಎಂದರೆ, ಮೈಸೂರು ದೇಶದ ಜನಸಂಖ್ಯೆಯಲ್ಲಿ ಸುಮಾರು ಮೂರನೇ ಒಂದು ಭಾಗ ಆಹಾರದ ಅಭಾವಕ್ಕೆ ಒಳಗಾಗಿದ್ದಾರೆ. ಎಂದರೆ ಸುಮಾರು 85 ಅಥವಾ 90 ಲಕ್ಷ ಜನಗಳಿಗೆ ಆಹಾರವನ್ನು ಒದಗಿಸತಕ್ಕ ಜವಾಬ್ದಾರಿಯನ್ನು ಮೈಸೂರು ದೇಶ ಇವೊತ್ತು ಹೊತ್ತಿದೆ.

ಈ ಆಹಾರದ ಪ್ರಶ್ನೆಯನ್ನು ಇವತ್ತು ಚರ್ಚೆ ಮಾಡತಕ್ಕ ಕಾಲದಲ್ಲಿ ಇದನ್ನು 3 ಭಾಗವಾಗಿ ವಿಂಗಡಣೆ ಮಾಡಿ ಹೇಳಬೇಕಾಗಿದೆ. ಒಂದು ಆಹಾರದ ಉತ್ಪನ್ನ, ಎರಡನೆಯದು ಹಂಚಿಕೆ, ಮತ್ತು ಮೂರನೆಯದು ಕನ್ಸ್ಯೂಮರ್ಸ್. ಈ ಬಗ್ಗೆ ಸರ್ಕಾರ ಎಷ್ಟುಮಟ್ಟಿಗೆ ತನ್ನ ಸಮರ್ಥನೆ ಮಾಡಿಕೊಂಡಿದೆ ? ಈ ಮೂರು ಅಂಗಗಳಲ್ಲಿ ಎಷ್ಟುಮಟ್ಟಿಗೆ ಮೈಸೂರು ಸರ್ಕಾರ ವಿಫಲಗೊಂಡಿದೆ ಎಂಬುದನ್ನು ಕಳಕಳಿಯಿಂದ ಹೇಳಬೇಕಾಗಿದೆ. ಎಲ್ಲಾ ಸಾಕಾರ್ಯಗಳೂ ಸರಿಯಾಗಿದ್ದಾಗ ಮಳೆ ಬೆಳೆ ಚೆನ್ನಾಗಿದ್ದಾಗ ಅವತ್ತೂ ಕೂಡ ಇಲ್ಲ 4-5 ಲಕ್ಷ ಟನ್ ಕೊರತೆ ಇತ್ತು. ಇವತ್ತು, ಮಳೆ ಬೆಳೆ ಹೋಗಿ ಬರಗಾಲ ಬಂದು ದೇಶದಲ್ಲಿ ಜನ ಬೆಂಡಾಗಿರತಕ್ಕ ಸಮಯದಲ್ಲಿ 20 ಲಕ್ಷ ಟನ್ ಕೊರತೆ ಇರತಕ್ಕ ಈ ಸನ್ನಿವೇಶದಲ್ಲಿ ಸರ್ಕಾರದಲ್ಲಿರತಕ್ಕ ತಾವು ಎನು ಮಾಡಿದ್ದೀರಿ ಎಂಬುದನ್ನು ಹೇಳುವುದಾದರೆ ಬಹುಶಃ ನಮಗೆ ಜನಗಳ ಪರಿಚಯ ಇಲ್ಲವೋ ಅಥವಾ ಇವತ್ತು ಜನ ಎಷ್ಟು ಹಸಿವಿನಿಂದ ನರಳುತ್ತಾ ಇದ್ದಾರೆ ಎಂಬ ಚಿತ್ರವನ್ನು ತಾವು ಕಾಣದವರಾಗಿದ್ದೀರೋ ತಿಳಿಯದಾಗಿದೆ. ಮುಂದೆ ಮಾಡುತ್ತೇವೆ ಎಂದು ಹೇಳಿ ಚಂದ್ರನಮ್ಮನ ಆಕಾಶದಲ್ಲಿ ತೋರಿಸುವ ರೀತಿಯಲ್ಲಿ ಅಂಕಿಅಂಶಗಳನ್ನು ಈ ನಭೆಯ ಮುಂದೆ ಇಟ್ಟಿರಿ. ಈಗಾಗಲೇ ಸುಮಾರು 4 ತಿಂಗಳಾಯಿತು. 4 ತಿಂಗಳಿನಿಂದ ಏನು ಕಾರ್ಯವನ್ನು ಈ ಸರ್ಕಾರ ಮಾಡಿತು ಎಂಬುದನ್ನು ಕೇಳಬೇಕಾಗಿದೆ ? ಮೈಸೂರು ದೇಶದ ಜನ ವಲಸೆ ಹೋಗಿದ್ದಾರೆ, ತಾಲ್ಲೂಕುಗಳನ್ನು ಬಿಟ್ಟು ಹೊರಗೆ ಹೋಗಿದ್ದಾರೆ. ಮೈಸೂರು ದೇಶದಲ್ಲಿರತಕ್ಕ ಜನ ಅರ್ಧ ನಶ್ತು ಹೋಗಿದೆ, ನಾಶವಾಗಿದೆ. ಕೆಂಗೆಟ್ಟು ಕಂಗಾಲಾಗಿದ್ದಾರೆ. ಅಂತಹ ಸಮಯದಲ್ಲಿ ಏನು ಮಾಡಿತು ಸರ್ಕಾರ ಎಂಬುದನ್ನು ನೋಡಬೇಕಾಗಿದೆ. ಇದು ಕೇವಲ ಉತ್ಪ್ರೇಕ್ಷೆಯ ಪ್ರಶ್ನೆಯಲ್ಲ. ಇವತ್ತು ದೇಶದಲ್ಲಿರತಕ್ಕ ಯಥಾಸ್ಥಿತಿ, ಏನು ಒಂದು ಪರಿಸ್ಥಿತಿ ದೇಶದಲ್ಲಿದೆ ಎಂಬುದನ್ನು ಇವತ್ತು ಪರಿಚಯ ತಾವು ಮಾಡಿಕೊಳ್ಳಬೇಕಾಗಿದೆ. ಇವತ್ತು 20 ಲಕ್ಷ ಟನ್ ಆಹಾರದ ಅಭಾವ ಇದೆ ಎಂದು ಹೇಳಿದ್ದೀರಿ. 4 ತಿಂಗಳಿನಿಂದ ಸರ್ಕಾರದವರು ಆಗಿಂದಾಗ್ಗೆ ಈ ಶಾಸನ ಸಭೆಯ ಮುಖಾಂತರ ಆಹಾರದ ಕೊರತೆಯನ್ನು ನೀಗಿಸಲು ಪ್ರತಿಹಳ್ಳಿಯಲ್ಲೂ ಕೂಡ ಆಹಾರ ಕೇಂದ್ರಗಳನ್ನು ತೆಗೆಯುತ್ತೇವೆ! ಆಹಾರವನ್ನು ಹಂಚಿಕೆ ಮಾಡುತ್ತೇವೆ, ಬೆರೆ ಇಳಿಸುತ್ತೇವೆ ಎಂದು ಇತ್ಯಾದಿ ಇತ್ಯಾದಿಯಾಗಿ ಈ ನಭೆಗೆ ಹೇಳುತ್ತಲೇ ಬಂದಿದ್ದಾರೆ. ಇವತ್ತಿನ ದಿವಸ ಕಟ್ಟಕಡೆಯದಾಗಿ ಆಹಾರ ಸಚಿವರನ್ನು ಕೇಳುತ್ತೇನೆ. 20 ಲಕ್ಷ ಟನ್ ಕೊರತೆ ಇರತಕ್ಕ ಈ ದೇಶದಲ್ಲಿ ಎಷ್ಟು ಲಕ್ಷ ಟನ್ ಅಕ್ಕಿಯ ಕೊರತೆ ಇದೆ, ಎಷ್ಟು ಲಕ್ಷ ಟನ್ ರಾಗಿಯ ಕೊರತೆ ಇದೆ. ಎಷ್ಟು ಲಕ್ಷ ಟನ್ ಹುರುಳಿಯ ಕೊರತೆ ಇದೆ? ಎಷ್ಟು ಲಕ್ಷ ಟನ್ ಕಡಲೆಯ ಕೊರತೆ ಇದೆ? ಈ ಒಂದು ಅಂಕಿಯನ್ನು ಕೊಡಿ ಎಂಬ ಪ್ರಶ್ನೆಯನ್ನು ಮಾಡುತ್ತೇನೆ. ಇವತ್ತು ಈ ಅಂಕ ಇಲ್ಲ. ತಮಗೆ ಬೇಕಾದ ರೀತಿಯಲ್ಲಿ ಉಡಾಫೆ ಮಾತನಾಡುತ್ತಾ ಇದ್ದೀರಿ. ರಾಗಿ ಇಲ್ಲದೆ ಎಷ್ಟು ಜನ ಕಷ್ಟ ಪಡುತ್ತಾ ಇದ್ದಾರೆ ಎಂಬ ಅಂಕಿ ಕೊಟ್ಟ ಪಕ್ಷದಲ್ಲಿ ಭರೆ ಈ ಸರ್ಕಾರದಲ್ಲಿ ಅಂಕಿ ಅಂಶ ಇದೆ, ಅಂಕಿ ಅಂಶ ಇಟ್ಟಿದ್ದಾರೆ ಎಂದು ಹೇಳುತ್ತೇನೆ. ತಮ್ಮಲ್ಲಿ ಜೊಳದ ಕೊರತೆ ಎಷ್ಟು ಇದೆ! ರಾಗಿಯ ಕೊರತೆ ಎಷ್ಟು ಇದೆ ಎನ್ನುವಂತಹ ಅಂಕಿ ಇಲ್ಲ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಎಲ್ಲಿಂದ ತರಬೇಕು? ಏನು ಮಾಡಬೇಕು ?

ಶ್ರೀ ಎಸ್. ಶಿವಪ್ಪ.—ಏನು ಮಾಡಬೇಕೆಂದು ಕೇಳಿದರೆ ನಾನೇನು ಹೇಳಲ? ಚೈನಾದವರು ನುಗ್ಗಿ ಬರುತ್ತಾ ಇದ್ದಾರೆ ಏನು ಮಾಡಬೇಕು ಎಂದು ಕೇಳಿದರೆ ನಾನೇನು ಹೇಳಲ? ಎಲ್ಲಿಂದ ತರಬೇಕು, ಏನು ಮಾಡಬೇಕು ಎಂದು ಅವರು ಕೇಳುವುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರನ್ನು ಕೇಳುವುದು ಅಕ್ಕಿ ಕೊರತೆ ಇದೆ, ರಾಗಿ ಕೊರತೆ ಇದೆ ಅದನ್ನು ಎಲ್ಲಿಂದ ತರಬೇಕು ಎಂಬುದನ್ನು ಹೇಳಿ ?

ಶ್ರೀ ಎಸ್. ಶಿವಪ್ಪ.—ಹೋದ ಸೆಪ್ಟೆಂಬರ್‌ನಲ್ಲಿ ಪಾಕಿಸ್ತಾನದವರ ಆಕ್ರಮಣ ಆಯಿತು, ಎಲ್ಲಿಂದ ತರೋಣ, ಏನು ಮಾಡೋಣ ಎಂದು ಕೇಳಿದರೆ ನಾನೇನು ಹೇಳಲಿ ? ತಾವು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕ ಕಾಲದಲ್ಲಿ ಎಲ್ಲಿಂದ ತರಬೇಕು, ಏನು ಮಾಡಬೇಕೆಂದು ನನ್ನನ್ನು ಪ್ರಶ್ನೆ ಮಾಡಿದರೆ, ನಾನು ಹೇಳಬೇಕೆಂದರೆ ಆಗ ನಾವೂ ನೀವೂ ಜಾಗ ಬದಲಾಯಿಸಬೇಕಾಗುತ್ತದೆ. ಆಗ ಉತ್ತರವನ್ನು ಹೇಳುತ್ತೇನೆ ಈಗ ಅಲ್ಲ. ಈಗ ತಾವು ಆ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಹೊತ್ತಿದ್ದೀರಿ.

Sri S. NIJALINGAPPA.—The Member should say wherefrom we should get ragi, because it is not produced in Mysore.

ಶ್ರೀ ಎಸ್. ಶಿವಪ್ಪ.—ರಾಗಿ ಎಷ್ಟು ಲಕ್ಷ ಟನ್ ಕೊರತೆ ಇದೆ, ಅಕ್ಕಿ ಎಷ್ಟು ಲಕ್ಷ ಟನ್ ಕೊರತೆ ಇದೆ ಎಂಬ ಲೆಕ್ಕವನ್ನು ಇವತ್ತು ಮೊದಲು ಕೊಡಿ ಎಂದು ಕೇಳುತ್ತೇನೆ. ನಿಮ್ಮಲ್ಲಿ ಆ ಲೆಕ್ಕವೇ ಇಲ್ಲ. ಎಷ್ಟು ಲಕ್ಷ ಟನ್ ಅಕ್ಕಿಯ ಕೊರತೆ ಇದೆ ಎಂಬ ಅಂಕಿ ಕೊಡಿ ಎಂದರೆ ಎಲ್ಲಿಂದ ತರೋಣ ಎಂದರೆ ನಾನೇನು ಹೇಳಲಿ ? ಅಂಕಿ ಇದೆಯೇ ತಮ್ಮ ಹತ್ತಿರ ಎಂದು ಕೇಳುತ್ತೇನೆ. ಅಂಕಿಯೇ ಇಲ್ಲ. ಈಗಾಗಲೇ ಮಾನ್ಯ ಆಹಾರ ಸಚಿವರು ಯಾವ ರೀತಿ ಆಹಾರವನ್ನು ಶೇಖರಣೆ ಮಾಡುತ್ತೇವೆ ಎಂಬ ವಿಷಯವನ್ನು ಹೇಳಿದ್ದಾರೆ. ಸುಮಾರು 88 ಸಾವಿರ ಟನ್ ಆಹಾರವನ್ನು ಪ್ರೊಕ್ಯೂರ್ ಮಾಡಿದ್ದೇವೆ ಎಂದು ಹೇಳಿದರು. ಇವತ್ತು ಪ್ರೊಕ್ಯೂರ್ ಮಾಡಿರತಕ್ಕ ರೀತಿಯೆಲ್ಲೂ ಕೂಡ ದೊಡ್ಡ ರೋಪ ಇದೆ. ರೈತೀ ಸಿನ್ಸಂ ಹಾಕಿದ್ದೀರಿ. ಅದಕ್ಕೆ ಬೆಲೆಯನ್ನು ನಿಗದಿ ಮಾಡಿದ್ದೀರಿ. ಇದರಲ್ಲೂ ಕೂಡ ರೋಪದೋಷಗಳು ಬೇಕಾದಷ್ಟು ಇವೆ. ಗೇಣಿದಾರ ಎಂದರೆ, ಯಾವನು ಬೆಳೆಯುತ್ತಾನೋ ಅವನು ರೆವಿ ಕೊಡಬೇಕೆಂದು ಮಾಡಿದ್ದೀರಿ. ಗೇಣೀದಾರನ ಹತ್ತಿರ ವಸೂಲು ಮಾಡಬಹುದೇ ಹೊರತು ಗೇಣೀದಾರ ಅವನು ಬೆಳೆದದ್ದನ್ನು ತೆಗೆದುಕೊಂಡು ಹೋಗಿ ಯಾವ ಜವಾನ್ದಾರನಿಗೆ ಕೊಡುತ್ತಾರೋ ಆ ಜವಾನ್ದಾರನಿಂದ ವಸೂಲು ಮಾಡುವ ಹಕ್ಕು ತಮಗೆ ಇಲ್ಲ. ಏಕೆಂದರೆ ಅವನು ಕಲ್ಟಿವೇಟರ್ ಅಲ್ಲ. ಈ ಒಂದು ರೋಪ ನಿಮ್ಮ ಆರ್ಡರ್‌ನಲ್ಲಿದೆ. ಪ್ರೈಸ್ ಸ್ಟಕ್ಚರ್‌ನಲ್ಲಿ ಕೂಡ ರೈತನಿಂದ ಕೊಳ್ಳತಕ್ಕ ಬೆಲೆ ಮತ್ತು ಮಾರತಕ್ಕ ಬೆಲೆ ಇವೆರಡರಲ್ಲೂ ಕೂಡ ತಾವು ಬಹಳ ದೊಡ್ಡ ಅಂತರವನ್ನು ಇಟ್ಟಿದ್ದೀರಿ. ಒಂದು ಕ್ವಿಂಟಾಲ್ ಅಕ್ಕಿಗೆ ಕೊಳ್ಳುವುದಕ್ಕೂ ಮಾರುವುದಕ್ಕೂ ಇರತಕ್ಕ ಅಂತರ ಸುಮಾರು 20 ರೂಪಾಯಿ ಇದೆ. ಇದರಿಂದ ಯಾವ ರೈತನಿಗೂ ಕೂಡ ಸರ್ಕಾರಕ್ಕೆ ಕೊಡಬೇಕೆನ್ನತಕ್ಕ ಉತ್ತೇಜನ ಇಲ್ಲ. ಮಾರಾಟ ಮಾಡತಕ್ಕ ಕಾಲದಲ್ಲಿ ತಾವು ತಮ್ಮ ಸಿಬ್ಬಂದಿ ಖರ್ಚು, ಕಮಿಷನ್ ಖರ್ಚು ಅದನ್ನೆಲ್ಲಾ ಹಾಕುತ್ತೀರಿ. ಹಾಗಿರುವಾಗ ಒಂದು ಕ್ವಿಂಟಾಲ್ ಅಕ್ಕಿಗೆ 20 ರೂಪಾಯಿ ವ್ಯತ್ಯಾಸ ಇದೆ ಎಂದರೆ ಇದು ಎಂತಹ ಸರ್ಕಾರ ಆಯಿತು ? ಇದನ್ನು ತಾವು ಯೋಚನೆ ಮಾಡಬೇಕು. ಒಂದು ಕ್ವಿಂಟಾಲ್ ಅಕ್ಕಿಯನ್ನು, ಕನ್ಸ್ಯೂಮರ್‌ಗೆ ಹಂಚಬೇಕಾದರೆ ಕೊಳ್ಳುವುದಕ್ಕೂ ಮತ್ತು ಮಾರುವುದಕ್ಕೂ ಇರತಕ್ಕ ಅಂತರ 20 ರೂಪಾಯಿ ಅಂದರೆ ಬಹುಶಃ ಅವನನ್ನು ಯಾವ ಗೋಳಿಗೆ ಸಿಕ್ಕಿಸುತ್ತ ಇದ್ದೀರಿ ಎಂಬುದನ್ನು ಯೋಚನೆ ಮಾಡಬೇಡವೇ ? 20 ರೂಪಾಯಿ ಅಂತರ ಎಂದರೆ ಇದು ಎಂತಹ ವ್ಯಾಪಾರ ! ಇದಕ್ಕಿಂತಲೂ ಅನ್ಯಾಯದ ಪರಮಾವಧಿ ಮತ್ತೇನು ಇದೆ ? ಮಾನ್ಯ ಸಚಿವರಿಗೆ ಹೇಳಲ್ಲೇನೆ ಇದೇ 20 ರೂಪಾಯಿಗಳನ್ನು ತಾವು ಬೆಳೆಯುವವನಿಗೆ ಕೊಟ್ಟಿದ್ದರೆ ಅವನಿಗೆ ಎಷ್ಟೋ ಸಂತೋಷವಾಗುತ್ತಾ ಇತ್ತು. ಹೆಚ್ಚು ಬೆಳೆಯುವುದಕ್ಕೆ ಅವನಿಗೆ ಉತ್ತೇಜನವಿರುತ್ತಾ ಇತ್ತು. ಕೊಳ್ಳುವವನಿಗೂ ರಿಯಾಯಿತಿ ಇಲ್ಲ, ಬೆಳೆದಿರತಕ್ಕವನಿಗೂ ರಿಯಾಯಿತಿ ಇಲ್ಲ ಮಧ್ಯವರ್ತಿ ಜನಕ್ಕೆ 20 ರೂಪಾಯಿ ಹಂಚುತ್ತೇವೆ ಎಂದರೆ ಇದರ ಅರ್ಥವೇನು ? ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಕಾಲದಲ್ಲಿ ಎಷ್ಟು ಕೋಟಿ ರೂಪಾಯಿ ಈ ಮಧ್ಯವರ್ತಿ ಕೆಲಸ ಮಾಡತಕ್ಕವರಿಗೆ ಖರ್ಚಾಗುತ್ತದೆ ಎಂಬ ಲೆಕ್ಕವನ್ನು ತಾವು ದಯವಿಟ್ಟು ಹೇಳಿ.

ಈ ದಿವಸ ಒಂದು ಕ್ವಿಂಟಾಲಿಗೆ 20 ರೂಪಾಯಿನಂತೆ ಒಂದು ಲಕ್ಷ ಟನ್ ಶೇಖರಿಸಿದ್ದರೆ ಎರಡು ಕೋಟಿ ರೂಪಾಯಿ ದೊರೆಯುತ್ತದೆ. ಈ ರೀತಿ ಕೊಳ್ಳುವ ಬೆಲೆಗೂ ಮಾರಾಟದ ಬೆಲೆಗೂ ವೆತ್ಯಾಸವಿದ್ದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದು ಸರಿಯಲ್ಲ. ಒಂದು ವ್ಯವಸ್ಥಿತ ರೀತಿ ನೀತಿ ಇಲ್ಲ, ಬೆಂಗಳೂರಿನಲ್ಲೇ ಒಂದು ನೀತಿ, ಇತರ ಕಡೆಗಳಲ್ಲೇ ಒಂದು ನೀತಿ. ಹೋಲ್‌ಸೇಲರ್ಸ್ ಮತ್ತು ರೀಟೆಲರ್ಸ್ ನೇಮಕ ಮಾಡುವಾಗ ಸರಿಯಾದ ನೀತಿಯನ್ನು ನುಸರಿಸಿರುವುದಿಲ್ಲ. ಒಟ್ಟು ವ್ಯಾಪಾರವನ್ನು ದೊಡ್ಡ ದೊಡ್ಡ ವ್ಯಾಪಾರಿಗಳಿಗೆ ಮತ್ತು ಸಹಕಾರ ಸಂಘಗಳಿಗೆ ವಹಿಸುತ್ತೇವೆಂದು ಹೇಳಿದ್ದರು. ಹೋದ ಅಧಿವೇಶನದಲ್ಲಿ ಖಾಸಗಿ ವರ್ತಕರಿಗೆ ಒಟ್ಟು ವ್ಯಾಪಾರ ಮಾಡುವುದನ್ನು ವಹಿಸುವ ವಿಚಾರ ಪುನರ್ವಿಮರ್ಶೆ ಮಾಡುವುದಾಗಿ ಹೇಳಿದ್ದರು. ಆದರೆ

(ಶ್ರೀ ಎಸ್. ಶಿವಪ್ಪ)

ಈಗ ಮಾಡಿರುವುದೇನು ! ಕೇವಲ 10-12 ಜನ ವರ್ತಕರಿಗೆ ಒಟ್ಟು ವ್ಯಾಪಾರವನ್ನು ವಹಿಸಿರುವಾಗ ಹಿಂದಿದ್ದವರಿಗೆ ಕೊಟ್ಟಿಲ್ಲ, ಸೊಸೈಟಿಗಳಿಗೆ ಸಹ ಒಟ್ಟು ವ್ಯಾಪಾರ ವಹಿಸಿದೆ. ವ್ಯಾಪಾರದಲ್ಲಿ ಅನುಭವವಿರುವವರಿಗೇಕೆ ವಹಿಸಲಿಲ್ಲ! ಹತ್ತಾರು ವರ್ಷಗಳಿಂದ ಕೋಟಿಗಟ್ಟಲೆ ವ್ಯಾಪಾರ ಮಾಡುತ್ತಿರುವವರು ನಗರದಲ್ಲಿ ಯಾರಿದ್ದಾರೋ ಅವರನ್ನು ಬಿಟ್ಟು ಮಿಲಿಟರಿ ಹೋಟೆಲ್‌ಗೆ, ಹೆಚ್ಚು ಅನುಭವವಿಲ್ಲದ ವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ? ಇದರಿಂದ ಕುಳಿತ ಕಡೆ ಅವರಿಗೆ ತಿಂಗಳಿಗೆ ಕಮಿಷನ್ 20 ಸಾವಿರ ರೂಪಾಯಿ ಬರುತ್ತದೆ. ಅವರನ್ನು ತೆಗೆದು ಹೋಲ್‌ಸೇಲ್ ವ್ಯಾಪಾರವನ್ನು ಪೂರ್ಣವಾಗಿ ಸಹಕಾರ ಸಂಘಗಳಿಗೇ ವಹಿಸಿ, ಅದನ್ನು ಒಪ್ಪುತ್ತೇನೆ. ಅದನ್ನು ಬಿಟ್ಟು ಬೇಕಾದವರಿಗೆ ಕೆಲವರಿಗೆ ಕೊಡುವುದು, ಕೆಲವರಿಗೆ ಕೊಡದಿರುವುದು ಸರಿಯಲ್ಲ. ಇದು ಅನ್ಯಾಯ. ಇದರಿಂದ ಒಂದು ಕಡೆ ವರ್ತಕರಿಗೆ ಅನ್ಯಾಯ, ಇನ್ನೊಂದು ಕಡೆ ಎಲ್ಲವನ್ನೂ ಸಹಕಾರ ಸಂಘಗಳಿಂದಲೇ ನಡೆಸುತ್ತೇವೆಂದು ಹೇಳುವಂತೆ ಮಾಡುತ್ತಿಲ್ಲ. ಹೀಗೆ ಮನಸ್ಸಿಗೆ ಬಂದಹಾಗೆ ಬೇಕಾದ ವರ್ತಕರಿಗೆ ಕೊಡುವ ನೀತಿಯನ್ನು ಬದಲಾಯಿಸಬೇಕು. ಮಂತ್ರಿಗಳು ವಾಸಮಾಡುವ ಬೆಂಗಳೂರು ನಗರದಲ್ಲೇ ಇಷ್ಟು ಅನ್ಯಾಯವಾಗುವಾಗ ಬೇರೆ ಕಡೆ ಎಷ್ಟಾಗ ಬಹುದು ಎಂಬುದನ್ನು ಯೋಚನೆ ಮಾಡಬೇಕು. ಸಹಕಾರ ಸಂಘಗಳು ಕೂಡ ಅನೇಕ ಪ್ರಭಾವಗಳಿಗೊಳಗಾಗಿ ಈ ದಿವಸ ಎಷ್ಟುಮಟ್ಟಿಗೆ ಕೆಲಸ ಮಾಡುತ್ತೇವೆ ಎಂಬುದನ್ನು ಸಹ ಗಮನಿಸಬೇಕು, ಅವು ಸತ್ಯದಿಂದ ಕೆಲಸ ಮಾಡುತ್ತಿಲ್ಲ.

ಅನೇಕರು ಲಕ್ಷಗಟ್ಟಲೆ ಹಣವನ್ನು ಆಹಾರ ಇರಾಖೆಯಿಂದ ತೆಗೆದುಕೊಂಡು ಭತ್ತ ಕೊಂಡು ಮಾರಿದ್ದಾರೆ. ಆದರೆ ಹೋಗಿ ನೋಡಿದಾಗ ಖಾಲಿ ಗೋಡೌನುಗಳನ್ನು ತೋರಿಸಿದ್ದಾರೆ. ಹೀಗೆ ಫುಡ್ ಕಾರ್ಪೊರೇಷನ್ ಕೊಟ್ಟ ಹಣವನ್ನು ಸೊಸೈಟಿಗಳವರು ತೆಗೆದುಕೊಂಡು ಅದನ್ನು ವ್ಯಾಪಾರ ದಲ್ಲಿ ತೊಡಗಿಸಿ ರಾಭ ಸಂಪಾದನೆ ಮಾಡಿರುವರು, ಬತ್ತ ಶೇಖರಣೆ ಮಾಡಿಲ್ಲ. ಅವರ ಮೇಲೆ ಕ್ರಮ ಕೈಕೊಂಡಿರುವುದೇನು ! ಈ ಸಭೆಯಲ್ಲಿ ಹೀಗೆ ಅನ್ಯಾಯ ಮಾಡಿದ್ದಾರೆಂದು ಅನೇಕ ಸಲ ಹೇಳಿದ್ದೇವೆ. ಈ ದಿವಸ ಪ್ರಭಾವಕ್ಕೊಳಗಾಗಿ ಲಕ್ಷಗಟ್ಟಲೆ ಬಡವರ ಹಣವನ್ನು ಮನಬಂದ ಹಾಗೆ ಖರ್ಚು ಮಾಡುತ್ತಿದ್ದಾರೆ. ಇದರಿಂದ ಕೆಲವರು ಲಕ್ಷಗಟ್ಟಲೆ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಿ ಹಣದ ಉಬ್ಬುರಕ್ಕೆ ಕಾರಣವಾಗಿದೆ, ಬೆಲೆಗಳು ಗಗನಕ್ಕೇರಿವೆ. ಬೆಲೆ ಹತೋಟಿಯಲ್ಲಿಲ್ಲ, ಒಂದು ಕಡೆ ಸರಕಾರ ಕಂಟ್ರೋಲ್ ದರದಲ್ಲಿ ಮಾರುತ್ತಿದೆ, ಮತ್ತೊಂದು ಕಡೆ ಅಂಗಡಿಗಳಲ್ಲಿ ಮನಸ್ಸಿಗೆ ಬಂದ ದರದಲ್ಲಿ ಮಾರಾಟವಾಗುತ್ತಿದೆ. ಸರಕಾರ 92 ಪೈಸೆಗೆ ಒಂದು ಕೆ.ಜಿ.ಯಂತೆ ಕೊಡುವುದು, ಇನ್ನೊಂದು ಕಡೆ ಕೆ.ಜಿ.ಗೆ. ಒಂದೂವರೆ ರೂಪಾಯಿನಂತೆ ಮಾರಾಟ ಮಾಡುವುದು—ಈ ರೀತಿ ಇದೆ. ಸರಕಾರ ಒಬ್ಬರಿಗೆ ತಿಂಗಳಿಗೆ ಎರಡು ಕೆ.ಜಿ.ಯೋ ಏನೋ ಕೊಡುತ್ತದೆ. ಇದು ಗೊಂದಲಕ್ಕೆ ಕಾರಣವಾಗಿದೆ, ನ್ಯಾಯಕ್ಕೆ, ನೀತಿಗೆ ದೇಶದಲ್ಲಿ ಮನ್ನಣೆ ಇಲ್ಲ. ಇದರಿಂದ ಕೆಲವರು ಎಷ್ಟು ಬೇಕಾದರೂ ಸಂಪಾದಿಸಲು ಅವಕಾಶವಿದೆ. ಬೆಲೆ ಹತೋಟಿಯಲ್ಲಿ ಇಲ್ಲ, ಒಂದು ರೀತಿಯಲ್ಲಿ ಲೀಗಲೈಸ್ಡ್ ಬ್ಲಾಕ್ ಮಾರ್ಕೆಟಿಂಗ್ ನಡೆಯುತ್ತಿದೆ. ಎಷ್ಟಕ್ಕೆ ಬೇಕಾದರೂ ಮಾರಬಹುದು. ನ್ಯಾಯವಾದ ಬೆಲೆಗೆ ಎರಡು ಕೆ.ಜಿ. ಮಾತ್ರ ಕೊಡುತ್ತಾರೆ, ಹೆಚ್ಚಿಗೆ ಬೇಕಾದ್ದನ್ನು ಹೆಚ್ಚು ಬೆಲೆ ಕೊಟ್ಟು ತೆಗೆದುಕೊಳ್ಳಬೇಕು. ಈ ರೀತಿ ಅನ್ಯಾಯ ಪರಂಪರೆ ದೇಶದಲ್ಲಿ ಬೆಳೆಯುತ್ತಿದೆ. ಇದಿರಬಾರದು, ಇದಿರು ವವರೆಗೂ ಆಹಾರ ಸಮಸ್ಯೆ ಪರಿಹಾರವಾಗುವುದಿಲ್ಲ. ಹಂಚಿಕೆ ವ್ಯವಸ್ಥೆ ಕಟ್ಟುನಿಟ್ಟಾಗಿಲ್ಲದಿದ್ದರೆ ಬೆಲೆ ಏರಿ ಜನತೆ ಬಹಳ ಕಷ್ಟಪಡಬೇಕಾಗುತ್ತದೆ; ಬೆಲೆ ಹಿಡಿತದಲ್ಲಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರಕಾರವವರು ನಿಶ್ಚಕ್ತರಾಗಿ ಬೆಲೆ ಹತೋಟಿಯಲ್ಲಡಲು ಕೈರಾಗದೆ ಏರುವುದಕ್ಕೆ ಅವಕಾಶ ಮಾಡಿದ್ದಾರೆ. ಪಳ್ಳಿಗರ ಸ್ಥಿತಿ ಬಹಳ ಕಷ್ಟದಲ್ಲಿದೆ, ಅವರ ಹತ್ತಿರ ಹಣವಿಲ್ಲ. ಹೊಟ್ಟೆ ತುಂಬ ತಿನ್ನಲು ಆಹಾರವಿಲ್ಲ. ಕೊಳ್ಳಬೇಕಾದರೆ ಹಿಂದೆ ಕೊಡುತ್ತಿದ್ದು ದರ ಎರಡರಷ್ಟು ಬೆಲೆ ಕೊಡಬೇಕು, ಒಂದು ಕಿಲೋ ಅಕ್ಕಿಗೆ ರೂ. 1-50 ಕೊಡಬೇಕಾಗಿದೆ. ಸಂಪಾದನೆ, ಸಂಬಳ ಹೆಚ್ಚದೆ ಒಂದೇ ರೀತಿಯಲ್ಲಿದೆ. ಆಹಾರ ಧಾನ್ಯಗಳ ಬೆಲೆ ಒಂದಕ್ಕೆ ಮೂರರಷ್ಟು ಹೆಚ್ಚಿರುವಾಗ ಹೊಟ್ಟೆ ತುಂಬಿಸಿಕೊಳ್ಳುವುದು ಹೇಗೆ? ಸರಕಾರವವರು ಈ ಸಮಸ್ಯೆಯನ್ನು ಬಗೆಹರಿಸಲು ನಿಶಕ್ತರಾಗಿದ್ದಾರೆ. ಬೆಲೆ ಹತೋಟಿ ಮಾಡ ಬೇಕಾದರೆ ಸರಕಾರ ಮುಂದೆ ಬಂದು ಎರ್ನಾ ವಹಿವಾಟನ್ನೂ ಅವೇ ವಹಿಸಿಕೊಳ್ಳಬೇಕು ; ಇಡೀ ಆಹಾರದ ವ್ಯಾಪಾರ ಸರಕಾರದ ಹತೋಟಿಯಲ್ಲೇ ಇರಬೇಕು, ಶೇಖರಣೆ, ಹಂಚಿಕೆ ಕೊನೆಯವರೆಗೂ ಸರಕಾರವೇ ವಹಿಸಿಕೊಂಡರೆ ಅನುಕೂಲವಾಗಲು ಸಾಧ್ಯವಿಲ್ಲ. ಒಂದು ಕಡೆ ಒಂದು ನೀತಿ, ಮತ್ತೊಂದು ಕಡೆ ಮತ್ತೊಂದು ನೀತಿ ಅನುಸರಿಸಿದರೆ ಬೆಲೆ ನಿಗದಿ ಮಾಡಿ ಒಂದೇ ಸಮನಾಗಿ ಹಾಗೆ ಮಾಡದಿದ್ದರೆ ಹಂಚುವುದಕ್ಕಾಗುವುದಿಲ್ಲ.

ಬೆಂಗಳೂರು ನಗರದಲ್ಲಿ ಎಂಟು ಕೆ.ಜಿ. ಆಹಾರವನ್ನು ಕೊಡಲು ಏರ್ಪಾಡು ಮಾಡುತ್ತೇವೆಂದು ಹೇಳಿವ್ದಾರೆ. ಹಳ್ಳಿಗಳಿಗೆ ಐದು ಕೆ.ಜಿ. ಕೊಡುವ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಹಳ್ಳಿಗಳಲ್ಲಿ ಓಪನ್ ಮಾರ್ಕೆಟ್ಟಿನಲ್ಲಿ ಕೊಳ್ಳಬಹುದೆಂದು ಅಲ್ಲಿಗೆ ಕಡಮೆ ಒದಗಿಸಬಹುದು. ಆದರೆ ಇದು ಯಾವ ನ್ಯಾಯ ? ಐದು ಸಾವಿರ ಜನಸಂಖ್ಯೆಗೆ ಮೇಲ್ಪಟ್ಟು ಇರತಕ್ಕಂಥ ಹಳ್ಳಿಗಳಿಗೆ ಇನ್‌ಫಾರ್ಮಲ್ ರೇಶನಿಂಗ್ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ನಮ್ಮ ಮೈಸೂರು ದೇಶದಲ್ಲಿ ಸೇಕಡ ಎಂಭತ್ತರಷ್ಟು ಭಾಗ ಜನ ಹಳ್ಳಿಗಳಲ್ಲಿ ಇದ್ದಾರೆ. ನಮ್ಮ ರಾಜ್ಯದಲ್ಲಿ 27,000 ಹಳ್ಳಿಗಳಿವೆ. ಐದು ಸಾವಿರ ಕ್ಕಿಂತ್ ಹೆಚ್ಚು ಜನಸಂಖ್ಯೆ ಇರತಕ್ಕ ಹಳ್ಳಿಗಳು ಎಷ್ಟು ಇವೆ ? ನಾನು ಹೇಳುವುದೇನೆಂದರೆ, ಹಳ್ಳಿಗಳಲ್ಲಿ ಇರತಕ್ಕಂಥ ಸೇಕಡ ಎಂಭತ್ತರಷ್ಟು ಜನ ಈ ಇನ್‌ಫಾರ್ಮಲ್ ರೇಶನಿಂಗ್ ಆಡಳಿತಕ್ಕೆ ಒಳಪಡದೇ ಅವರು ಹೊರಗೆ ಇರುತ್ತಾರೆ. ಸರಕಾರ ಈ ನೀತಿ ಅನುಸರಿಸುವುದರಿಂದ ಸೇಕಡ 80 ರಷ್ಟು ಜನಕ್ಕೆ ಅನುಕೂಲತೆ ಸಿಕ್ಕುವುದಿಲ್ಲ, ಇದರಿಂದ ಅವರಿಗೆ ತೊಂದರೆಯಾಗುತ್ತದೆ. ಸರಕಾರದ ಆಹಾರ ಹಂಚಿಕೆ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ನಮ್ಮ ಭಾರತ ದೇಶ ಒಂದು ಯುನಿಟ್ಟಾಗಿ ಪರಿಗಣಿಸ ಬೇಕು. ಜೋನಲ್ ಸಿಸ್ಟಂ (Zonal System) ಮಾಡದೆ ಎಲ್ಲ ರಾಜ್ಯಗಳೂ ಸೇರಿ ಒಂದು ಯೂನಿಟ್ ಮಾಡಿ ವ್ಯವಸ್ಥೆ ಮಾಡದೇ ಇದ್ದರೆ ಸಮಗ್ರವಾಗಿ ಈ ಆಹಾರ ಹಂಚಿಕೆ ನೀತಿಯನ್ನು ಯಶಸ್ವಿಯಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಕೇಂದ್ರ ಸರಕಾರದ ಮೇಲೆ ನೀವು ಪ್ರಭಾವ ಬೀರಿ ದಕ್ಷಿಣ ಇಂಡಿಯಾದ ಎಲ್ಲ ರಾಜ್ಯಗಳಿಗೆ ಒಂದೇ ಒಂದು ಜೋನು ಇರುವುದಕ್ಕೆ ಪ್ರಯತ್ನ ಮಾಡಬೇಕು. ನಿಮಗೆ ಕೇಂದ್ರದ ಮೇಲೆ ಪ್ರಭಾವ ಬೀರುವ ಶಕ್ತಿ ಇದೆಯೇ ಇಲ್ಲವೇ ಎಂಬುದು ಈ ಯೋಜನೆ ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದರ ಮೇಲೆ ಇದೆ. ಅನೇಕ ಸಲ ನಮ್ಮ ರಾಜ್ಯದವರು ಮಂತ್ರಿಗಳು ದಾನಶೂರಕರ್ಣ ಆಗುತ್ತಾರೆ. ಹೇರಳವಾಗಿ ವಿದ್ಯುತ್ ಶಕ್ತಿ ಇದೆ ಎಂದು ದಕ್ಷಿಣ ವಲಯಕ್ಕೆಲ್ಲಾ ವಿದ್ಯುತ್ ಶಕ್ತಿ ಕೊಡುತ್ತೇವೆಂದು ದಾನಶೂರ ಕರ್ಣನಂತೆ ಒಪ್ಪಿಕೊಂಡುಬಿಟ್ಟಿರಿ. ಅಕ್ಕಿಯ ವಿಚಾರದಲ್ಲಿ ದಕ್ಷಿಣ ಭಾರತಕ್ಕೆ ಒಂದೇ ಜೋನು ಇರತಕ್ಕದ್ದು ಎಂದು ಏತಕ್ಕೆ ಪ್ರತಿಪಾದನೆ ಮಾಡಲಿಲ್ಲ ? ನಿಮ್ಮ ಹತ್ತರ ಏನಾದರೂ ಇದ್ದರೆ ಅದನ್ನು ಕಸಿದುಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಏನು ಮಾಡಬೇಕು ಹೇಗೆ ಮಾಡಬೇಕು ಗೊತ್ತಾಗುವುದಿಲ್ಲವೇ ! ಕೇಂದ್ರದ ಮೇಲೆ ಪ್ರಭಾವ ಬೀರತಕ್ಕಂಥ ಶಕ್ತಿ ಛಾತಿ ನಿಮಗೆ ಇರಬೇಕು. ಅಂಥ ಸಾಮರ್ಥ್ಯವನ್ನು ಮೈಸೂರು ದೇಶ ಪಡೆಯ ಬೇಕು. ಅಕ್ಕಿಯ ವಲಯದ ವಿಚಾರದಲ್ಲಿ ದಕ್ಷಿಣ ಭಾರತಕ್ಕೆ ಒಂದೇ ಒಂದು ಯೂನಿಟ್ ಮಾಡದೇ ಇದ್ದರೆ ಜನರಿಗೆ ಅಕ್ಕಿ ಸಿಕ್ಕುವುದಿಲ್ಲ. ಜನ ಸಾಯುವಂಥ ಪರಿಸ್ಥಿತಿ ಬರುತ್ತದೆ ಎಂದು ಹೇಳುತ್ತೇನೆ. ಆದುದರಿಂದ ನೀವು ಪ್ರಭಾವವಂತರಾಗಿ ದಕ್ಷಿಣ ಭಾರತಕ್ಕೆ ಅಕ್ಕಿಯ ವಿಚಾರದಲ್ಲಿ ಒಂದೇ ಯೂನಿಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆಹಾರದ ಬಗ್ಗೆ ನೀವು ಮಾಡಿದ ಕೆಲಸ ಏನು ಅಂದರೆ ಜನತೆಯ ಮುಂದೆ ಅನೇಕ ಸ್ಲೋಗನ್ಸ್ ಇಟ್ಟಿದ್ದೀರಿ. ಸೋಮವಾರ ಸಾಯಂಕಾಲ ಒಂದು ಊಟ ಬಿಡಿ. ತರಕಾರಿ ಹಣ್ಣು ಜಾಸ್ತಿ ತಿನ್ನಿ. ಇಂಥ ಸ್ಲೋಗನ್ಸ್‌ನಿಂದ ಏನು ಪ್ರಯೋಜನ ಹೇಳಿ. ಮಂತ್ರಿಗಳಾದವರು ತಾವೇ ಸ್ವತಃ ಆಚರಣೆ ಮಾಡುತ್ತಿಲ್ಲ. ಕಾರವಾರ ಜಿಲ್ಲೆಯಲ್ಲಿ ಒಂದು ಸೋಮವಾರ ರಾತ್ರಿ ಮಂತ್ರಿಗಳು ಟ್ರಾವಲರ್ಸ್ ಬಂಗಲೋನಲ್ಲಿ ಭವ್ಯ ಭೋಜನ ಸುಖಲೋಲುಪರಾಗಿ ಮಾಡಿದರು ಎಂಬ ಸಮಾಚಾರ ವನ್ನು ಪತ್ರಿಕೆಯಲ್ಲಿ ಓದಿದ್ದೇನೆ. ತಾವೇ ಸ್ವತಃ ಮಂತ್ರಿಗಳು ಕಾರ್ಯಗತ ಮಾಡದೇ ಇದ್ದರೆ ಏನು ಪರಿಣಾಮವಾಗುತ್ತದೆ ಎಂದು ಅವರನ್ನು ಕೇಳುತ್ತೇನೆ. ದನರಾ ಹಬ್ಬ ಆಚರಿಸುವುದು ಬೇಡ, ಪ್ರದರ್ಶನ ಬೇಡ ಮೆರವಣಿಗೆ ಬೇಡ ಎಂದು ಹೋದ ವರ್ಷ ನಿಲ್ಲಿಸಿದ್ದೀರಿ. ಆದರೆ ನಿಮ್ಮ ವರ್ಧಂತಿ ಉತ್ಸವ ಸಡಗರವಾಗಿ ನಡೆಯುತ್ತಿದೆ. ವರ್ಧಂತಿ ಉತ್ಸವದ ದಿನ ಕೇಕ್ ಕತ್ತರಿಸುವ ಸಮಾರಂಭ ನಡೆಯುತ್ತದೆ. ಈ ವರ್ಷ ಕಾಂಗ್ರೆಸ್ ವಸ್ತು ಪ್ರದರ್ಶನ ಜರುಗುವುದು ನಿಲ್ಲಲಲ್ಲ. ನಿಮ್ಮ ಭೋಗಕ್ಕೆ ಏನೇನು ಬೇಕೋ ಅದೆಲ್ಲವೂ ನಡೆಯಬೇಕು. ನಿಮ್ಮ ವರ್ಧಂತಿ ಉತ್ಸವ ನಿಂತು ಹೋಯಿತೇ ! ಪುನಃ ಈ ವರ್ಷ ವರ್ಧಂತಿ ಉತ್ಸವ ಮಾಡುವುದಕ್ಕೆ ಸನ್ನಾಹ ಮಾಡುತ್ತಿದ್ದಾರೆ. ಇದು ಯಾವ ನೀತಿ ! ನಿಮ್ಮ ನೆನಪಿಗೆ ಒಂದು ವಿಷಯ ತಂದುಕೊಡುತ್ತೇನೆ. ಹಿಂದಕ್ಕೆ ಆಹಾರವಿಲ್ಲದೆ ಫ್ರೆಂಚ್ ದೇಶದಲ್ಲಿ ಒಂದು ಕ್ರಾಂತಿ ಆಯಿತು. ಜನರು ಹೊಟ್ಟೆಗೆ ಅನ್ನ ಕೊಡಿ ಬ್ರೆಡ್ ಕೊಡಿ ಮೊಟ್ಟೆ ಕೊಡಿ ಎಂದು ಹೇಳುತ್ತಾ ಜನರು ಚಕ್ರವರ್ತಿಯ ಕಡೆಗೆ ಹೋದರು. ಆಗ್ಗೆ ಅಲ್ಲಿ ಇದ್ದ ರಾಣಿ ಕೇಳಿದಳು, ಈ ಜನ ಇಲ್ಲಿ ಏತಕ್ಕೆ ಬಂದಿದ್ದಾರೆ ಎಂದು. "There is no bread to eat" ಎಂದು ಹೇಳಿದರು. ಆಗ್ಗೆ ಚಕ್ರವರ್ತಿಯ ರಾಣಿ "if there is no bread, why there did not eat cakes ?" ಎಂದು ಕೇಳಿದಳು ಬ್ರೆಡ್ ಇಲ್ಲದಿದ್ದರೆ ಕೇಕ್ ತಿನ್ನಿ ಎಂದು ಹೇಳುವುದೇ ! ಹೊಟ್ಟೆಗೆ ಅನ್ನ ಇಲ್ಲ ಎಂದು ಜನ ಹೇಳಿದರೆ ಹಣ್ಣು ತಿನ್ನಿ ತರಕಾರಿ ತಿನ್ನಿ ಕೋಳಿ ಮೊಟ್ಟೆ ತಿನ್ನಿ ಎಂದು ಮಂತ್ರಿಗಳು ಹೇಳುತ್ತಾರೆ. ಈ ರೀತಿ ಹೇಳುವುದರಿಂದ ದೇಶದಲ್ಲಿಯ ಆಹಾರ ಸಮಸ್ಯೆ ಬಗೆಹರಿಯುತ್ತದೆಯೇ ! ಒಂದು ಮಾತನ್ನು ವೀರ್ಯವಾಗಿ, ಆಳವಾಗಿ ವಿಚಾರ ಮಾಡಿ. ಹಸಿವಿನ ಕ್ರಾಂತಿ,

(ಶ್ರೀ ಎಸ್. ಶಿವಪ್ಪ)

ಉಪವಾಸದ ಕ್ರಾಂತಿ ಫ್ರೆಂಚ್ ದೇಶದಲ್ಲಿ ಆದ ಹಾಗೆ ನಮ್ಮ ದೇಶದಲ್ಲಿಯೂ ಕೂಡ ಆಗುತ್ತದೆ. ಈ ಹಸಿವಿನ ಕ್ರಾಂತಿ ಚಕ್ರವರ್ತಿಯೇ ಇರಲಿ ಎಂಥವರನ್ನೂ ಬಿಡುವುದಿಲ್ಲ. ನಿಮ್ಮ ಹೇಳಿಕೆ ಮತ್ತು ಮಾತುಗಳಿಗೂ ಕೃತಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ನಿಮ್ಮ ಅಂತರಂಗವನ್ನು ಪರೀಕ್ಷೆ ಮಾಡಿಕೊಂಡು ನೋಡಿ. ನೀವು ಹೇಳುವುದನ್ನು ಸರಿಯಾಗಿ ಪರಿಪಾಲನೆ ಮಾಡಿಕೊಂಡು ಬರುತ್ತೀರಾ, ಪರೀಕ್ಷೆ ಮಾಡಿ. ಎರಡನೇ ಮಹಾಯುದ್ಧ ಕಾಲದಲ್ಲಿ ರೇಶನಿಂಗ್ ಪದ್ಧತಿ ಜಾರಿಗೆ ಬಂದಾಗ್ಗೆ ಇಂಗ್ಲೆಂಡಿನಲ್ಲಿ ಸರ್ ಕ್ರಾಫರ್ಡ್ ಕ್ರಿಪ್ಸ್ ಅವರು ಸಾಮಾನ್ಯ ಜನರೊಂದಿಗೆ ಕ್ಯೂನಲ್ಲಿ ನಿಂತು ತಮ್ಮ ಸರದಿ ಬಂದಾಗ್ಗೆ ರೇಶನ್ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯದ ವರ್ಣನೆಯನ್ನು ಪೇಪರಿನಲ್ಲಿ ನಾನು ಓದಿದ್ದೇನೆ. ನಮ್ಮಲ್ಲಿ ಎಷ್ಟು ಜನ ಮಂತ್ರಿಗಳು ಆ ರೀತಿ ಮಾಡುತ್ತಾರೆ? ಇಲ್ಲಿಯ ಮಂತ್ರಿಗಳಿಗೆ ಯಾವ ಕಾನೂನು ನಿಯಮ ಅನ್ವಯವಾಗುವುದಿಲ್ಲ. ನೀವು ಸುಖಲೋಲುಪರಾಗಿದ್ದೀರಿ. ಬರೀ ಭೋಗಾಪೇಕ್ಷೆಯುಳ್ಳವರಾಗಿದ್ದೀರಿ. ಹಳ್ಳಿಗಳ ಕಡೆಗೆ ಹೋಗಿ ಜನ ಏನು ಮಾಡುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಬರಬೇಕು ಎಂದು ಹೇಳುತ್ತೇನೆ. ಇಂದು ಹಸಿದ ಹೊಟ್ಟೆಗೆ ಒಂದರ್ಧ ಸೇರು ಅಕ್ಕಿ ಬೇಕು ಎಂದು ಬಡವರು ಗೋವುಗಳನ್ನು ಮಾರುತ್ತಿದ್ದಾರೆ. ಜೀವಧಾರಣೆ ಮಾಡುವುದಕ್ಕಾಗಿ ಒಂದು ಕೆ.ಜಿ. ರಾಗಿ ತಂದು ತಿನ್ನುತ್ತಿದ್ದಾರೆ. ಅನೇಕರು ದನಗಳಿಗೆ ಮೇವು ಇಲ್ಲದೆ ಸೊಪ್ಪು ಹಾಕುತ್ತಿದ್ದಾರೆ. ಕಡಿಮೆ ಬೆಲೆಗೆ ದನಗಳನ್ನು ಮಾರಿಕೊಳ್ಳುತ್ತಿದ್ದಾರೆ. ಕಟುಕರು ಸಾವಿರಾರು ದನಗಳನ್ನು, ಗೋವುಗಳನ್ನು ಕೊಂಡುಕೊಂಡು ಒಯ್ಯುತ್ತಿದ್ದಾರೆ. ದೇಶದಲ್ಲಿಯ ಗೋ ಸಂಪತ್ತು ನಾಶವಾಗಿ ಹೋಗುತ್ತಿದೆ. ಜನರಿಗೆ ದನಗಳಿಗೆ ಕುಡಿಯುವುದಕ್ಕೆ ನೀರು ಸಹ ಇಲ್ಲ. ಕ್ಷಾಮ ಪೀಡಿತ ಅನೇಕ ಗ್ರಾಮಗಳಲ್ಲಿ ಒಂದು ಕೊಡ ಕುಡಿಯುವ ನೀರನ್ನು ಎರಡಾಣೆ ನಾಲ್ಕಾಣೆಯಂತೆ ಮಾರುತ್ತಿದ್ದಾರೆ. ಕುಡಿಯುವ ನೀರನ್ನು ಕೊಂಡು ಜೀವನ ಸಾಗಿಸಬೇಕು ಎಂದರೆ ಎಂಥ ಕ್ರೂರ, ಎಂಥ ಘೋರ ಪರಿಸ್ಥಿತಿ ಬಂದಿದೆ! ಇಂಥ ಕಠಿಣ ಪರಿಸ್ಥಿತಿ ಪರಿಹಾರ ಮಾಡುವ ಶಕ್ತಿ ಸರಕಾರಕ್ಕೆ ಇದೆಯೇ! ಇದುವರೆಗೆ ನಮ್ಮ ದೇಶದಲ್ಲಿ ನಿಮ್ಮ ಪಕ್ಷವು 18 ವರ್ಷ ರಾಜ್ಯಾಡಳಿತ ಮಾಡಿದರೂ ಕೂಡ ಒಂದು ಕ್ಷಾಮ ತಡೆಗಟ್ಟುವ ಶಕ್ತಿ ಸರಕಾರಕ್ಕೆ ಇಲ್ಲ. ನಿಮ್ಮ ಸರಕಾರಕ್ಕೆ ಒಂದು ಸರಿಯಾದ ತಳಹದಿ ಇಲ್ಲ. ಬರೀ ಗಾಳಿಯಲ್ಲಿ ಇರತಕ್ಕಂಥ ಸರಕಾರ ಆಗಿದೆ. ಆದುದರಿಂದ ಕ್ಷಾಮ ತಡೆಗಟ್ಟತಕ್ಕಂಥ ಶಕ್ತಿಯನ್ನು ಸರಕಾರ ಕಳೆದುಕೊಂಡಿದೆ. ಅಮೇರಿಕಾ ದೇಶದಿಂದ ಗೋಧಿ ತರಿಸಿ ಕೊಡುತ್ತೇವೆ ಅದನ್ನು ತಿನ್ನಬಹುದು ಎಂದು ಹೇಳುತ್ತೀರಿ. ಅಮೇರಿಕಾದ ಅಧ್ಯಕ್ಷ ಜಾನ್‌ಸನ್ ಮಹಾರಾಯರು ಗೋಧಿ ಕೊಟ್ಟಿದ್ದಾರೆ. ಆ ಗೋಧಿ ಎಷ್ಟರ ಮಟ್ಟಿಗೆ ನಾವು ತಿಂದು ಜೀವನ ಮಾಡಬಹುದು? ನಮಗೆ ಬೇಕಾದುದು ರಾಗಿ. ರಾಗಿ ಕೊಟ್ಟರೆ ಜನ ಅದನ್ನು ತಿನ್ನುತ್ತಾರೆ. ಬರೀ ಗೋಧಿ ತಿನ್ನುವವರು ಅದರ ಜೊತೆಗೆ ತರಕಾರಿ ತುಪ್ಪ ತಿನ್ನಬೇಕಾಗುತ್ತದೆ. ರಾಗಿಯ ಹಾಗೆ ಗೋಧಿಯನ್ನು ಜೀರ್ಣ ಮಾಡತಕ್ಕ ಶಕ್ತಿ ಜನರಲ್ಲಿ ಇಲ್ಲ. ಬಡ ಜನರ ಬದಲು ನೀವು ಹೆಚ್ಚು ಪ್ರಮಾಣದಲ್ಲಿ ಗೋಧಿ ತೆಗೆದುಕೊಳ್ಳಿರಿ. ಹಣ್ಣು, ತರಕಾರಿ, ತುಪ್ಪ, ಕೊಂಡು ತಿನ್ನುವ ಶಕ್ತಿ ಮೇಲಿನ ವರ್ಗದ ಜನರಿಗೆ ಇದೆ. ಅಂಥವರಿಗೆ ಗೋಧಿ ಕೊಡಿ. ಹಳ್ಳಿಗಳಲ್ಲಿ ರೈತನಿಗೆ ಅಕ್ಕಿ ಕೊಡಿ, ರಾಗಿ ಕೊಡಿ. ಶ್ರೀಮಂತ ವರ್ಗದವರಿಗೆ ಗೋಧಿ ಹಂಚಬೇಕು. ಇದಕ್ಕೆ ಸರಕಾರ ಗಮನ ಕೊಡಬೇಕು.

ಕೊನೆಯದಾಗಿ ಒಂದು ಮಾತು ಹೇಳುವುದೇನೆಂದರೆ, ಇಂದು ದೇಶದಲ್ಲಿ ಘೋರ ಪರಿಸ್ಥಿತಿ ಇದೆ. ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನೀವು ಪೂರ್ಣವಾಗಿ ಅಸಮರ್ಥರಾಗಿದ್ದೀರಿ. ನಿಮ್ಮ ಕೈಯಲ್ಲಿ ಇದನ್ನು ಬಗೆಹರಿಸುವುದು ಸಾಧ್ಯವಿಲ್ಲ. ಲಂಚಬೋರ ಅಧಿಕಾರ ವರ್ಗದಿಂದ ಆಹಾರ ವ್ಯವಸ್ಥೆ ಮಾಡುವುದು ಸಾಧ್ಯವಿಲ್ಲ. ಇದನ್ನು ನಾನು ನಿಮಗೆ ಹೇಳಬೇಕಾಗಿದೆ. ಕೋ-ಆಪರೇಟಿವ್ ಸೊಸೈಟಿ ಮೂಲಕ ಯಾವ ಧಾನ್ಯವೇ ಆಗಲಿ ಜನ ಸಾಮಾನ್ಯಕ್ಕೆ ನೀವು ಸರಿಯಾಗಿ ಕೊಡುವುದಿಲ್ಲ. ಸೊಸೈಟಿಗಳಿಗೆ ಬರತಕ್ಕ ಆಹಾರ ಧಾನ್ಯದಲ್ಲಿ ಸೇಕಡ 50 ರಷ್ಟು ಎಲ್ಲಿಯೋ ಹೋಗುತ್ತದೆ. ಸೇಕಡ 20 ರಷ್ಟು 30 ರಷ್ಟು ಹಳ್ಳಿಗರಿಗೆ ಸೇರುತ್ತದೆ. ಅಲ್ಲಿಯೂ ಕೂಡ ಖದೀಮರು ಇದ್ದಾರೆ. ಅವರ ಕೈಯಲ್ಲಿ ಈ ವ್ಯವಹಾರ ನಡೆಯುತ್ತಿದೆ. ಈ ವ್ಯವಸ್ಥೆಯಲ್ಲಿ ಇಷ್ಟು ಲೋಪದೋಷಗಳು ಇರುವಾಗ ಇಂಥವರ ಕೈಯಲ್ಲಿ ಅಡ್ಮಿನಿಸ್ಟ್ರೇಷನ್ ಇರುವಾಗ 20 ಲಕ್ಷ ಟನ್ ಆಹಾರ ಹೇಗೆ ಹಂಚುತ್ತೀರಿ? ಈ ವ್ಯವಸ್ಥೆ ಇಂಥ ಅಧಿಕಾರ ವರ್ಗದವರ ಕೈಯಲ್ಲಿ ಇದೆ.

3-00 P.M.

ಇವತ್ತಿನ ದಿವಸ ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಕೊಟ್ಟಿರುವ 20 ಲಕ್ಷ ಟನ್ ಆಹಾರ ಧಾನ್ಯವನ್ನು ತಾವು ಯಾವ ರೀತಿ ಹಂಚುತ್ತೀರಿ ಎಂದು ಕೇಳುತ್ತೇನೆ. ಪ್ರತಿಯೊಂದು

ಪಂಚಾಯಿತಿ ಕೇಂದ್ರದಲ್ಲೂ ಸರ್ಕಾರದವರು ಒಂದೊಂದು ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯುವುದು ಒಳ್ಳೆಯದು ಎಂದು ಹೇಳಿದೆ. ಅದರ ಬಗ್ಗೆ ಏನೊಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ನಾನಾದರೂ ಹೇಳುತ್ತೇನೆ, ಕೆಲವು ಸೊಸೈಟಿಗಳಲ್ಲಿ ಸರಿಯಾದ ಲೆಕ್ಕವಿಲ್ಲ. ಹಣವಿಲ್ಲ. ಕೆಲವು ಕಡೆ ತಿಂಗಳಿಟ್ಟಿದ್ದಾರೆ. ನೀವು ಸೊಸೈಟಿಗಳ ಮುಖಾಂತರ ಏನು ಒಂದು ಆಹಾರವನ್ನು ಹಂಚುವ ಪದ್ಧತಿ ತಂದಿದ್ದೀರಿ ಅದು ವಿಫಲವಾಗಿದೆ, ಸರಿಯಾಗಿ ನಡೆಯುತ್ತಿಲ್ಲ. ಈ ರೀತಿಯಾದರೆ ಜನಗಳಿಗೆ ಆಹಾರ ಸಿಗುವುದಿಲ್ಲ. ಜನರು ಅನ್ನವಿಲ್ಲದೆ ಹಸಿವಿನಿಂದ ನರಳುತ್ತಿದ್ದಾರೆ. ನೀವು ಹಂಚುವ ಆಹಾರವು ಜನಗಳಿಗೆ ಸರಿಯಾಗಿ ತಲಪದಿದ್ದರೆ, ಈಗಿರುವ ವ್ಯವಸ್ಥೆಯು ಮುರಿದು ಬೀಳುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಆಹಾರ ಸಚಿವರು ಜಾಣರು. ಯಾವ ಯಾವ ತಿಂಗಳಲ್ಲಿ ಎಷ್ಟೆಷ್ಟು ಆಹಾರವನ್ನು ಹಂಚುತ್ತೇವೆ ಎನ್ನುವುದನ್ನು ಬಹಳ ಕಷ್ಟದಿಂದ ಲೆಕ್ಕ ಹಾಕಿ ಹೇಳಿದ್ದಾರೆ. ಆಹಾರಧಾನ್ಯವನ್ನು ಸರಿಯಾಗಿ ಹಂಚಬೇಕಾದರೆ ನಿಮ್ಮಲ್ಲಿ ಒಂದು ಸರಿಯಾದ ಆಡ್ಮಿನಿಸ್ಟ್ರೇಟಿವ್ ಸೆಟ್-ಅಪ್ ಬೇಕು. ಹಂಚಿಗೆ ಕೆಲಸವನ್ನು ನೀವು ಸರಿಯಾಗಿ ಮಾಡದಿದ್ದರೆ ಜನರು ಇನ್ನೂ ಹೆಚ್ಚಿನ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆಗ ಜನಗಳು ನಿಮ್ಮಮ್ಮ ಆಡಳಿತದಿಂದ ಕೆಳಗೆ ಇಳಿಸುತ್ತಾರೆ. ಜನರು ಅನ್ನವಿಲ್ಲದೆ ಸಾಯುವ ಸ್ಥಿತಿ ಬಂದಿದೆಯೆಲ್ಲಾ ಎನ್ನುವ ಒಂದೇ ಒಂದು ಪ್ರಶ್ನೆ ನನಗೆ ಕಾಣಿಸುತ್ತಿದೆ.

ಕೊನೆಯದಾಗಿ ಹೇಳುವುದು ದೇಶದಲ್ಲಿ ಈ ಪರಿಸ್ಥಿತಿಯನ್ನು ತಂದಿರತಕ್ಕ ಕೀರ್ತಿ ಈ ಸರ್ಕಾರಕ್ಕೆ ಬಂದಿದೆ. ತಾವು ಹೇಳಬಹುದು, ಯಾರು ಬಂದರೆ ಏನು ಮಾಡುತ್ತಾರೆ ಎಂದು. ಈ ಪ್ರಶ್ನೆ ದೊಡ್ಡದು ಅಲ್ಲ, ಸಮಸ್ಯೆಯನ್ನು ಯಾವ ರೀತಿ ಎದುರಿಸಬೇಕು, ಎಷ್ಟರಮಟ್ಟಿಗೆ ಎದುರಿಸಬೇಕು ಎನ್ನುವುದು ಮಹಾ ಪ್ರಶ್ನೆ. ಮಹಾ ಸವಾಲು ನಿಮ್ಮ ಎದುರಿಗೆ ಇದೆ. ಈ ಸವಾಲನ್ನು ನೀವು ಇನ್ನು ಕೆಲವು ತಿಂಗಳುಗಳಲ್ಲಿ ಎದುರಿಸದೇ ಹೋದರೆ, ಜನತೆಯ ಸವಾಲನ್ನು ನೀವು ಎದುರಿಸಬೇಕಾಗುತ್ತದೆ. ಆಗ ಆ ಸವಾಲಿಗೆ ನೀವು ತುತ್ತಾಗಿ ಭಸ್ಮವಾಗಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳುವುದಕ್ಕಾದರೂ ಸಾಕಷ್ಟು ನಿಗ ವಹಿಸಿ ಪರಿಹಾರವನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ ಂಡಿತವಾಗಿ ಭಸ್ಮವಾಗುತ್ತೀರಿ. ಒಟ್ಟಿನಲ್ಲಿ ಹೇಳುವುದಾದರೆ ಅನ್ನದೇವತೆಯ ಶಾಪ ನಮ್ಮ ರಾಜ್ಯಕ್ಕೆ ಬಂದಿದೆ. ತಮ್ಮ ಒಂದು ತಪ್ಪಿನ ಫಲವಾಗಿ, ಈ ಶಾಪ ಬಂದಿವೆ. ಈ ಶಾಪಕ್ಕೆ ನೀವೇ ಹೊಣೆ. ಇಷ್ಟು ಹೇಳಿ ಸರ್ಕಾರದವರು ತಂದಿರತಕ್ಕ ಈ ಬೇಡಿಕೆಯನ್ನು ನಾನು ವಿರೋಧಿಸುತ್ತೇನೆ.

† ಶ್ರೀ ಗಾಂಜೀವೀರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೇ, ಈ ಬೇಡಿಕೆಯ ಮೇಲೆ ನಾವು ಬೇಕಾದಷ್ಟು ಭಾಷಣ ಮಾಡಬಹುದು. ಏಕೆಂದರೆ, ದೇಶದಲ್ಲಿ ಈಗ ನತತವಾಗಿ 3—4 ವರ್ಷದಿಂದ ಮಳೆ ಬಾರದೆ ಒಂದು ಕಠಿಣ ಪರಿಸ್ಥಿತಿ ಉಂಟಾಗಿದೆ. ಈ ರೀತಿಯಾಗಿರುವುದು ನಮ್ಮ ಮೈನೂರು ರಾಜ್ಯದಲ್ಲೇ ಅಲ್ಲ, ಆಂಧ್ರ ಮತ್ತು ಮದ್ರಾಸ್ ರಾಜ್ಯಗಳನ್ನು ಬಿಟ್ಟರೆ, ಉತ್ತರ ಭಾಗದ ಮಹಾರಾಷ್ಟ್ರ, ಉತ್ತರಪ್ರದೇಶ, ರಾಜಸ್ಥಾನಗಳಲ್ಲೂ ಮಳೆ ಸರಿಯಾಗಿ ಆಗದೆ ಆಹಾರದ ಕೊರತೆ ಇದ್ದೇ ಇದೆ. ಇದರ ಒಂದು ಪರಿಣಾಮ ಧಾರಣೆವಾಸಿಗಳು ಬಹಳ ಹಾಸ್ತಿಯಾಗಿದೆ. ಸಾಕಷ್ಟು ಆಹಾರವನ್ನು ಬೆಳೆಯುತ್ತಿಲ್ಲ. ಈ ಕಾರಣದಿಂದ ಪರದೇಶದ ನೆರವನ್ನು ಪಡೆಯಲೇಬೇಕಾಗಿದೆ. ಇದಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಇಂತಹ ಒಂದು ಕಠಿಣ ಪರಿಸ್ಥಿತಿಯಲ್ಲಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಈ ಸಭಾ ನಾಯಕರು ಕೆಲವು ಪ್ರಶ್ನೆಗಳನ್ನು ಕೇಳಿದಾಗ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಏನಾದರೂ ಸಲಹೆಗಳನ್ನು ಕೊಡುತಾರೆಯೇ ಎಂದು ಕಾತುರತೆಯಿಂದ ನೋಡುತ್ತಿದ್ದೆ. ಆದರೆ ಏನನ್ನೂ ಸಹ ಕೊಡಲಿಲ್ಲ. ನಾವುಗಳು ಪ್ರಜಾನಾಯಕರುಗಳಾಗಿ ಅರಿಸಿ ಬಂದಾಗ ನಮಗೆ ತಿಳಿದ ರೀತಿ ಏನಾದರೂ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳು ರಾಗಿಯನ್ನು ಎಲ್ಲಿಂದ ತಂದು ಹಂಚುವುದು ಎಂದು ಕೆಳಿದಾಗ ಯಾರೂ ಏನೂ ಹೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಒರಿಸ್ಸಾ, ಆಂಧ್ರ, ಮದ್ರಾಸಿನಿಂದ ರಾಗಿ ತಂದು ಹಂಚುವುದು.

ಶ್ರೀ ಗಾಂಜೀವೀರಪ್ಪ.—ಸಭಾ ನಾಯಕರು ಈ ಪ್ರಶ್ನೆ ಕೇಳಿದಾಗ ಶ್ರೀಮಾನ್ ರೇವಣಸಿದ್ದಪ್ಪನವರು ಮತ್ತು ವಿರೋಧಪಕ್ಷದ ನಾಯಕರು ಉತ್ತರ ಹೇಳಲಿಲ್ಲ. ಈಗ ಹೇಳುತ್ತಿದ್ದೀರಿ. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಜವಾಬ್ದಾರಿ ಸ್ಥಾನದಲ್ಲಿದ್ದೇವೆಂದು ತಿಳಿದುಕೊಳ್ಳಬೇಕು. ಆಳುವ ಪಕ್ಷ ರಾಜೀನಾಮೆ ಕೊಟ್ಟರೆ, ದೇಶದಲ್ಲಿ ಈ ರೀತಿ ಪರಿಸ್ಥಿತಿ ಬಂದರೆ ವಿರೋಧ ಪಕ್ಷದ ನಾಯಕರು ಸರ್ಕಾರದ ಹೊಣೆಯನ್ನು ಹೊತ್ತುಕೊಳ್ಳುವ ಜವಾಬ್ದಾರಿ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಇರುತ್ತದೆ. ತಮಗೆ ರಾಜ್ಯವಾಳುವುದಕ್ಕೆ ಬರುವುದಿಲ್ಲ. ನಿಮ್ಮ ಪಾಲಿಸಿ ಚೆನ್ನಾಗಿ ಇಲ್ಲ. ನಿಮ್ಮ ಜಾಗದಿಂದ ಕೆಳಗೆ ಇಳಿಯಿರಿ ಎಂದು ಹೇಳುತ್ತೀರಿ. ಆದರೆ ಯಾವ ರೀತಿ ರಾಜ್ಯವಾಳಬೇಕ,

(ಶ್ರೀ ಗಾಂಡಿ ವೀರಪ್ಪ)

ಯಾವ ರೀತಿ ಆಹಾರವನ್ನು ಹಂಚಬೇಕು ಎಂದು ಸರ್ಕಾರಕ್ಕೆ ಸಲಹೆಯನ್ನು ಕೊಡಲಲ್ಲ. ಬರೀ ಟೀಕೆ ಮಾಡುವುದು ಸರಿಯಲ್ಲ. ಕೋ-ಆಪರೇಟಿವ್ ಸೊಸೈಟಿಗಳಿಗೆ ಆಹಾರವನ್ನು ಕೊಡುತ್ತೀರಿ, ಅವರು ಚೆನ್ನಾಗಿ ಕೆಲಸ ಮಾಡುವುದಿಲ್ಲ. ವರ್ತಕರಿಗೆ ಕೊಡುತ್ತೀರಿ, ಅವರು ಚೆನ್ನಾಗಿ ಕೆಲಸ ಮಾಡುವುದಿಲ್ಲ; ಆಹಾರದ ಕೊರತೆ ಇಷ್ಟು ಇದ್ದರೂ ಸರ್ಕಾರ ಏನನ್ನೂ ಮಾಡುತ್ತಿಲ್ಲ ಎಂದು ಹೇಳುವಾಗ ನಿಮ್ಮಲ್ಲ ಜವಾಬ್ದಾರಿತನವಿದೆಯೇ ಎಂದು ನೋಡಿಕೊಳ್ಳಬೇಕು. ದೇಶದಲ್ಲಿ ಮಳೆಯಾಗಿಲ್ಲ, ಬೆಳೆಯಾಗಿಲ್ಲ ಎಂಬುದು ನಿಜವಾದ ಮಾತು. ಅದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ಮಳೆಯಾಗಿ ಬೆಳೆಯಾಗಿದ್ದರೆ ಈ ರೀತಿಯ ಕೊರತೆ ಬರುತ್ತಿರಲಲ್ಲ. ದಿವಂಗತ ರಾವ್ ಬಹದ್ದೂರ್ ಶಾಸ್ತ್ರಿಗಳು ಸಹ ದೇಶದ ಸಂರಕ್ಷಣೆಗೆ ಡಿಫೆನ್ಸ್ ಎಷ್ಟು ಅಗತ್ಯವೋ, ಅಷ್ಟೇ ಪ್ರಾಮುಖ್ಯತೆಯನ್ನು ಆಹಾರಕ್ಕೂ ಕೊಟ್ಟರು. ಕೇಂದ್ರ ಸರ್ಕಾರದವರು ಮತ್ತು ಮೈಸೂರು ಸರ್ಕಾರದವರು ಪ್ರತಿಯೊಂದು ಯೋಜನೆಯಲ್ಲೂ ಆಹಾರದ ಬಾಬಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಸರ್ಕಾರದವರು 4ನೇ ಯೋಜನೆಯ ಮೊದಲನೇ ವರ್ಷದಲ್ಲಿ ಆಹಾರದ ಬಾಬಿಗೆ ಹೆಚ್ಚು ಖರ್ಚು ಮಾಡಬೇಕೆಂದಿರುವುದನ್ನು ನಾವುಗಳು ನೋಡಬಹುದು. ಅದಷ್ಟು ಜಾಗ್ರತೆ ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯಬೇಕು ಎಂದು ಸರ್ಕಾರದವರು ರೈತರಿಗೆ ಗೊಬ್ಬರ, ಪಂಪುಸೆಟ್ಟುಗಳು, ಬಾವಿ ತೆಗೆಯಲು ಸಾಲಗಳನ್ನು ಕೊಡುತ್ತಿದ್ದಾರೆ. ಸಣ್ಣ ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯಲು ಏನೇನು ಸೌಕರ್ಯಗಳು ಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನೇನು ಮಾಡಿದ್ದೀರಿ ಎಂದು ಟೀಕೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಅದರ ಬದಲು ಸರ್ಕಾರಕ್ಕೆ ಏನಾದರೂ ಸಲಹೆ ಮಾಡಿ. ನೀವು ಮಾಡುವ ಸಲಹೆಗಳಲ್ಲಿ ಏನಾದರೂ ತಿರುಳು ಇದ್ದರೆ ಸರ್ಕಾರದವರು ಖಂಡಿತ ಒಪ್ಪಿಕೊಳ್ಳುತ್ತಾರೆ. ವಿರೋಧಪಕ್ಷದವರಿಂದ ಏನಾದರೂ ಸಲಹೆಗಳು ಬರುತ್ತದೆ ಎಂದು ನೋಡಿದರೆ, ಏನೂ ಬರಲಲ್ಲ. ಶ್ರೀ ರೇವಣಸಿದ್ದಪ್ಪನವರು ಮಾತನಾಡುವಾಗ ಏನಾದರೂ ಸಲಹೆಗಳನ್ನು ಕೊಡುತ್ತಾರೇನೋ ನೋಡೋಣ.

ಈಗ ರೆವಿ ಸಿಸ್ಟಂ ವಿಷಯ ಹೇಳಿದರು. ರೈತರಿಂದ ವಸೂಲು ಮಾಡುತ್ತಾರೆ. ಡಿಸ್ಟ್ರಿಬ್ಯೂಷನ್ ಸರಿಯಾಗಿ ಮಾಡುವುದಲ್ಲ ಎಂದು ಹೇಳಿದರು. ಆಹಾರ ಸಂಗ್ರಹಣೆ ಆಗದಿದ್ದರೆ, ವಸೂಲಿ ಆಗದಿದ್ದರೆ 7 ಟನ್ಸ್ ಅಥವಾ 10 ಟನ್ಸ್ ಆಹಾರ ಜನರಿಗೆ ಹೇಗೆ ಕೊಡುವುದು? ರೆವಿ ಬೇಡ, ರೈತರಿಗೆ ತೊಂದರೆ ಆಗುತ್ತದೆ ಎಂದು ಹೇಳುತ್ತಾರೆ. ಬೆಳೆದಂಥ ರೈತನಿಂದ ರೆವಿ ತೆಗೆದುಕೊಳ್ಳುವುದು ಅತ್ಯಲ್ಪ. ಸರ್ಕಾರಕ್ಕೆ ರೆವಿ ಕೊಡುವುದನ್ನು ರೈತ ಸಂತೋಷವಾಗಿ ಕೊಡುತ್ತಾ ಇದ್ದಾನೆ. ರಾಜಕೀಯಕ್ಕೆ ಉಪಯೋಗಿಸಬಾರದು. ಬೆಳೆದವನು ಯಾರೂ ಕೊಡುವುದಿಲ್ಲ ಎಂದು ಹೇಳುತ್ತಾ ಇಲ್ಲ. ಡಿಫರೆನ್ಸ್ ಆಫ್ ರೇಟ್ಸ್ ಹೇಳಿದರು. ಕೊಂಡುಕೊಳ್ಳುವಾಗ ಕಡಿಮೆ ರೇಟು ಕೊಡುತ್ತಾರೆ. ಮಾರ್ಕೆಟ್ ರೇಟು ನೋಡಿದರೆ ಜಾಸ್ತಿ ಆಗಿದೆ ಎಂದು ಹೇಳಿದರು. ಸರ್ಕಾರ ಏನು ನಿರ್ಧಾರ ಮಾಡಿದ್ದಾರೆ. ಆ ರೇಟು ನ್ಯಾಯವಾಗಿ ಇಲ್ಲವೆ? 50-60 ರೂಪಾಯಿಗೆ ಕಳ್ಳ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದರೆ, ರೇಟು ರೆವಿ ಮಾಡಬೇಕಾದರೆ ಕೊಡಬೇಕು ಎಂದರೆ, ಡಿಸ್ಟ್ರಿಬ್ಯೂಷನ್ ಹೇಗೆ ಮಾಡಬೇಕಾಗುತ್ತದೆ? ಇದಕ್ಕೆ ಹಣ ಇದೆಯೇ? ಅದು ನ್ಯಾಯ ತತ್ವವೇ? ಅದುದರಿಂದ ಬೆಳೆದವನಿಗೆ ಪ್ರೋತ್ಸಾಹ ಮಾಡಬೇಕಾಗಿದೆಯೇ ವಿನಾ ಕಡಿಮೆ ರೇಟಿನಲ್ಲಿ ಕೊಂಡುಕೊಳ್ಳುತ್ತಾರೆ ಎಂದು ಹೇಳಿದರೆ ಕೊಡುವವನೂ ಕೊಡದ ಹಾಗೆ ಮಾಡುವ ಮನೋಭಾವ ಬರುತ್ತದೆ. ಅದು ಸರಿಯೇ? ಕೆಲವು ವಿಚಾರಗಳಲ್ಲಿ ನೋಡುತ್ತಾ ಹೋದರೆ ಒಂದಾದರೂ ಕೂಡ ಸಲಹೆ ಬರಲಲ್ಲ. ಬೆಲೆ ಏರಿಕೆ ಆಗಿದೆಯೆಂದು ಹೇಳಿದರು, ನಿಜ.ಮಾನ್ಯ ಸ್ನೇಹಿತರೆಲ್ಲ ನೋಡಲು, ಯುನೈಟೆಡ್ ಕಿಂಗ್‌ಡಂ, ಜರ್ಮನಿ ಫ್ರಾನ್ಸ್, ಅಲ್ಲಿಯ ಅಂಕಿ ಅಂಶಗಳನ್ನು ನೋಡಬಹುದು ಅವನ್ನು ನೋಡಿದರೆ, ಆಹಾರ ಧಾನ್ಯದ ಬೆಲೆ ಏರಿಕೆ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಕೂಡ ಬಹುಶಃ ನಮ್ಮಲ್ಲಿ ಇರುವುದಕ್ಕಿಂತ ಹೆಚ್ಚಿಗೆ ಆಗಿದೆ. ಅದುದರಿಂದ ಇದು ಪ್ರಪಂಚದಲ್ಲಿ ಇರುವ ಟೆಂಡೆನ್ಸಿ ಬೇರೆ ಅಲ್ಲ.

Sri C. J. MUCKANNAPPA.—If there is more production, automatically the prices will come down.

ಶ್ರೀ ಗಾಂಡಿವೀರಪ್ಪ.—ಅಂಕಿಅಂಶದ ಮೇಲೆ ವಿರೋಧ ಮಾಡಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

Sri H. R. KESHAVA MURTHY (Gandasi).—It is not correct.

ಶ್ರೀ ಗಾಂಡಿವೀರಪ್ಪ.—ಪ್ರಪಂಚದ ಯಾವ ದೇಶದ ಬೆಲೆಗೆ ಹೋಲಿಸಿದರೂ ನಮ್ಮ ಆಹಾರ ಧಾನ್ಯಗಳ ಬೆಲೆ ಹೆಚ್ಚಿಗೆ ಎಂದು ಹೇಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಿರೋಧ ಪಕ್ಷದ ನಾಯಕರ ಹತ್ತಿರ ಅಂಕಿಅಂಶ ಇಲ್ಲ ಸಬ್ ಸ್ಟಾನ್ಷಿಯೇಟ್ ಮಾಡಿಲ್ಲ ಎಂದು ಹೇಳಿದರು. ಇವರ ಹತ್ತಿರವೂ ಅಂಕಿಅಂಶ ಇಲ್ಲ. ತಾವು ಬರಿ ಅಂಕಿಅಂಶ ಕೊಟ್ಟುಬಿಡಿ, ನೀವು ಹೇಳಿದಂತೆ ಒಪ್ಪಿಕೊಳ್ಳುತ್ತೇವೆ. ಇಲ್ಲದಿದ್ದರೆ ನೀವೂ ಜನತಾ ಎಕ್ಸ್‌ಪ್ರೆಸ್ ಆದರೆ ಹೇಗೆ ?

ಶ್ರೀ ಗಾಂಜಿವೀರಪ್ಪ.—ಇದು ನಿರ್ವಿವಾದ ಅದ ನಂಗತಿ. ಯಾವ ದೇಶದಲ್ಲಿ ಎಷ್ಟೆಷ್ಟು ಬೆಲೆ ಜಾಸ್ತಿಯಾಗಿದೆ ಎನ್ನುವುದಕ್ಕೆ ಅಂಕಿಅಂಶ ಇಲ್ಲಿ ಕೊಟ್ಟಿದ್ದಾರೆ. ಅದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಎಲ್ಲಾ ರಾಷ್ಟ್ರಗಳಲ್ಲೂ ಕೂಡ, ಅದರಲ್ಲೂ ಯುನೈಟೆಡ್ ಕಿಂಗ್‌ಡಮ್‌ನಲ್ಲಿ, ಜರ್ಮನಿಯಲ್ಲಿ, ಫ್ರಾನ್ಸ್‌ನಲ್ಲಿ ಧಾರಣೆವಾಸಿಗಳ ರೇಟು ಜಾಸ್ತಿ ಆಗುತ್ತಾ ಇರುವಾಗ, ನಮ್ಮಲ್ಲಿ rise in prices ಬಹಳ ಕಡಿಮೆಯಾಗಿದೆಯೇ ಏನಾ ಬೇರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ದೇಶದಲ್ಲಿ ಒಳ್ಳೆಯ ಪರಿಸ್ಥಿತಿ ಇದೆ ಎಂದು ನಾನು ಸಮರ್ಥನೆ ಮಾಡಿಕೊಳ್ಳುತ್ತಿದ್ದೇನೆ ಎಂದು ಹೇಳಬೇಕಾಗಿಲ್ಲ. ಕಾರಣ ಏನು ಎಂದು ತಿಳಿದುಕೊಳ್ಳಬೇಕು. ಬರೀ ಮೈಸೂರಿನಲ್ಲಿ ಮೈಸೂರು ಸರ್ಕಾರದವರು ಏನೂ ಕೆಲಸ ಮಾಡದೆ, ಪ್ರೈಸಸ್ ಕಂಟ್ರೋಲ್ ಮಾಡದೆ ಇರುವುದರಿಂದ ಮಿತಿ ಮೀರಿ ರೇಟು ಬೆಳೆಯುವುದಕ್ಕೆ ಅವಕಾಶ ಆಯಿತು ಎಂದು ಶ್ರೀ ಶಿವಪ್ಪನವರು ಹೇಳುವುದು ಸರಿಯಲ್ಲ. ಇಂಡಿಯಾ ದೇಶದಲ್ಲಿ ಎಲ್ಲಾ ಕಡೆಯೂ ಹೀಗೆ ಆಗುತ್ತಾ ಇರುವುದರಿಂದ, ಅದಕ್ಕೆ ನಾನಾ ಕಾರಣಗಳು ಇವೆ.

ಇನ್‌ಫ್ಲೇಷನರಿ ಟೆಂಡೆನ್ಸೀಸ್ ಪ್ರಪಂಚದಲ್ಲಿಯೇ ಜಾಸ್ತಿ ಆಗುತ್ತಾ ಇದೆ. ಅಷ್ಟೇ ಅಲ್ಲ. ಆಹಾರಧಾನ್ಯ ಪ್ರಾಡಕ್ಷನ್ ಕಡಿಮೆಯಾಗುತ್ತಾ ಇದೆ. ಕೊಂಡುಕೊಳ್ಳುವವರು ಜಾಸ್ತಿ ಆಗುತ್ತಾ ಇದ್ದಾರೆ. ಹೀಗೆ ಇರುವುದರಿಂದ, ನಾನಾ ಕಾರಣಗಳಿಂದ ಪ್ರೈಸಸ್ ಜಾಸ್ತಿ ಆಗುತ್ತಾ ಇದೆ. ಅದು ಒಳ್ಳೆಯದಲ್ಲ. Inflation ಹೋಗಬೇಕೆಂದರೆ, ಏನು ಮಾಡಬೇಕು ! ಕೇಂದ್ರ ಸರ್ಕಾರದವರು ಮಾಡತಕ್ಕ ಆರ್ ಇಂಡಿಯಾ ಪಾಲಿಸಿ. ಪಾರ್ಲಮೆಂಟಿನಲ್ಲಿ ಮಾಡುವ ಭಾಷಣವನ್ನು ಇಲ್ಲಿ ಬಂದು ಮಾಡಿದರೆ ಮೈಸೂರು ಸರ್ಕಾರದವರು ಪ್ರೈಸಸ್ ಕಂಟ್ರೋಲ್ ಮಾಡುತ್ತಾ ಇಲ್ಲ ಎಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ. 15 years of Demorcratic Planning ನಲ್ಲಿ ಹೀಗೆ ಹೇಳಿದ್ದಾರೆ:

